ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯುನಿಸ್ಟ್ ಪಕ್ಷ[ಮಾರ್ಕ್ಸ್‌ವಾದಿ]ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 5 ಸಂಚಿಕೆ 13 ಮಾರ್ಚ್ 27, 1983 ಬೆಲೆ 60 ಪೈಸೆ

ಕರ್ನಾಟಕ :

ರಾಜ್ಯದ ಮುಂಗಡ ಪತ್ರ ಕುರಿತು

ಕರ್ನಾಟಕ ರಾಜ್ಯದ ಜನತಾ ಸರ್ಕಾರದ ಆಯವ್ಯಯ ಪತ್ರದಲ್ಲಿ (ಬಜೆಟ್) ಜನರಿಗೆ ಹಿತಕರವಾದ ಹಲವಾರು ಸೂಚನೆಗಳನ್ನು ಕಾಣಬಹುದೆಂದು ಜನತಾಪಕ್ಷದ ಮಂತ್ರಿಗಳು ಹೇಳುತ್ತ ಬಂದಿದ್ದರೂ ಕೂಡ, 1983–84ರ ಅಂದಾಜು ಪತ್ರಿಕೆಯನ್ನು ಮುಖ್ಯ ಮಂತ್ರಿ ರಾಮಕೃಷ್ಣ ಹೆಗ್ಗಡೆಯವರು ತಾರೀಖು 18ರಂದು ವಿಧಾನಸಭೆಯಲ್ಲಿ ಮಂಡಿಸಿದನಂತರ ಅದನ್ನು ಅಭ್ಯಾಸ ಮಾಡಿದ ಯಾರೇ ಆದರೂ ಹೆಚ್ಚು ಪ್ರೋತ್ಸಾಹದಾಯಕವಲ್ಲದ ಬಜೆಟ್ ರಾಜ್ಯದ ಜನರ ಮುಂದಿಡಲಾಗಿದೆಂಬ ಒಟ್ಟಭಿಪ್ರಾಯಕ್ಕೆ ಬಂದದ್ದಾದರೆ ಅದು ತಪ್ಪೆಂದು ಹೇಳಲು ಸಾಧ್ಯವಾಗುವುದಿಲ್ಲ.

ಗಂಭೀರವಾಗಿ ವಿಚಾರ ಮಾಡಿಯೇ ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ಘೋಷಣೆಗಳನ್ನು ಪ್ರಕಟಿಸಿ ಮತಯಾಚನೆ ಮಾಡುತ್ತಿವೆ. ಕಾಂಗ್ರೆಸ್ ಪಕ್ಷ ಮಾತ್ರ ಜನರಿಗೆ ಮೋಸ ಮಾಡಿ ಮತ ಪಡೆಯುವ ಉದ್ದೇಶದಿಂದ ಅಲ್ಲಸಲ್ಲದ ಆಶ್ವಾಸನೆಗಳನ್ನು ಚುನಾವಣೆಯ ದಿನಗಳಲ್ಲಿ ಮತದಾರರಿಗೆ ನೀಡುತ್ತಿದ್ದು, ಮುಂದೆ ಅಧಿಕಾರಕ್ಕೆ ಬಂದ ನಂತರ ತಾವಿತ್ತ ಆಶ್ವಾಸನೆಗಳನ್ನು ಗಾಳಿಗೆ ತೂರುತ್ತಿರುವುದನ್ನು ನೋಡುತ್ತಿದ್ದೇವೆ,

ಪಶ್ಚಿಮ ಬಂಗಾಳದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಮುಖಂಡತ್ವದ ಎಡರಂಗ ತಾನು ಚುನಾವಣೆಯ ಸಮಯದಲ್ಲಿತ್ತ ಆಶ್ವಾಸನೆಗಳನ್ನು ಪೂರೈಸುತ್ತಾ ಬಂದಿದೆ. ಆ ಆಶ್ವಾಸನೆಗಳನ್ನು ಜಾರಿಮಾಡುವುದರಲ್ಲಿ ಎಂಥ ಸಂಕಷ್ಟ ಬಂದರೂ ಕೂಡ ಕೊಟ್ಟ ವಚನ ಪಾಲಿಸುವುದರಲ್ಲಿ ಅದು ಹಿಂದೆ ಬಿದ್ದಿಲ್ಲವೆಂಬುದು ಆ ಸರ್ಕಾರದ 7 ವರ್ಷಗಳ ಆಡಳಿತ ತೋರಿಸಿಕೊಟ್ಟಿದೆ.

ನಮ್ಮ ರಾಜ್ಯದಲ್ಲಿ ಸಿ.ಪಿ.ಐ. (ಎಂ) ಸಿ.ಪಿ.ಐ. ಜೊತೆ ಸೇರಿಕೊಂಡು ಜನತಾ ರಂಗ ಬಹುಮತ ಪಡೆದು, ಕ್ರಾಂತಿ ರಂಗ, ಜನತಾದಲ್ಲಿ ವಿಲೀನವಾಗಿ ಜನತಾ ಸರ್ಕಾರ ಅಧಿಕಾರದಲ್ಲಿ ಬಂದಿದೆ. ಆ ಸರ್ಕಾರದ ಪ್ರಥಮ ಬಜೆಟ್ಟನ್ನು ವಿಧಾನ ಸಭೆ, ವಿಧಾನ ಪರಿಷತ್ತುಗಳಲ್ಲಿ ಮಂಡಿಸಲಾಗಿದೆ. ಚುನಾವಣೆಯ ನಂತರ ಎರಡೇ ತಿಂಗಳಲ್ಲಿ ಅಂದಾಜು ಪತ್ರಿಕೆಯನ್ನು ಮಂಡಿಸುವಾಗ ಚುನಾವಣಾ ಘೋಷಣೆಯಲ್ಲಿ ಜನತೆಗಿತ್ತ ವಚನಗಳನ್ನು ನೆನಪಿಟ್ಟುಕೊಳ್ಳುವುದು ಅತ್ಯಗತ್ಯ. ತಾನಿತ್ತ ಎಲ್ಲಾ ಆಶ್ವಾಸನೆಗಳನ್ನು ಮೊದಲನೇ ಬಜೆಟ್ಟಿನಲ್ಲೇ ಪೂರೈಸಬೇಕೆಂದು ಅಪೇಕ್ಷಿಸುವುದಿಲ್ಲ. ಆದರೆ ಆಶ್ವಾಸನೆಗಳಲ್ಲಿಯ ಪ್ರಾಮುಖ್ಯತೆಗಳನ್ನು ತಿಳಿದುಕೊಂಡು ಕಾರ್ಯರೂಪದಲ್ಲಿಳಿಯುವುದು ಮಾತ್ರ ಅತ್ಯಗತ್ಯ. ಆ ದೃಷ್ಟಿಯಲ್ಲಿ ರಾಜ್ಯದ ಅಂದಾಜು ಪತ್ರಿಕೆ ಎಡವಿ ಬಿದ್ದಿದೆಯು ಹೇಳಬಹುದು.

ಅಡೆತಡೆಗಳು

ಈ ರೀತಿಯಾಗಲಿಕ್ಕೆ ಕಾರಣಗಳೇ ಇಲ್ಲದಿಲ್ಲ, ರಾಜ್ಯಗಳ ಹೆಚ್ಚಿನ ಸಂಪನ್ಮೂಲಗಳನ್ನು ಕೇಂದ್ರ ಸರ್ಕಾರ ಬಳಸಿಕೊಂಡು ಹೋಗುತ್ತದೆ. ಬಂಡವಾಳ ವರ್ಗದ ಸರ್ಕಾರ ಕರ ಹೇರುವಾಗ, ವಿನಾಯತಿ ತೋರಿಸುವಾಗ ಬಡವ–ಶ್ರೀಮಂತನೆಂಬ ಭೇದ–ಭಾವ ತೋರಿಸುವುದಿಲ್ಲ. ಕಾರಣ ಬಡವರಿಗೆ ಸಿಗುವ ವಿನಾಯತಿಯ ಹೆಚ್ಚಿನಲಾಭ ಶ್ರೀಮಂತರಿಗೂ ಸಿಗುತ್ತದೆ. ಶ್ರೀಮಂತರಮೇಲೆ ಹೇರುವ ಕರಭಾರಕ್ಕೆ ಬಡವರೂ ಪಾಲುಗಾರರಾಗುತ್ತಾರೆ. ಕೇಂದ್ರ ಸರ್ಕಾರದ ಆದಾಯದಲ್ಲಿ ಆಯಾ ರಾಜ್ಯಕ್ಕೆ ಸಿಗಬೇಕಾದ ಪಾಲು ಸಿಗಲೇಬೇಕೆಂದು ಹೋರಾಡುವ ಪ್ರವೃತ್ತಿ ರಾಜ್ಯ ಸರ್ಕಾರಗಳಿಗಿಲ್ಲ. (ಆದರೆ ಪ. ಬಂಗಾಳ, ತ್ರಿಪುರ, ಕಾಶ್ಮೀರ, ಆಂಧ್ರ, ತಮಿಳುನಾಡು ಸರ್ಕಾರಗಳು ಈ ದಿಸೆಯಲ್ಲಿ ಕೂಗೆಬ್ಬಿಸುತ್ತಿವೆ). "ನಮ್ಮ ರಾಜ್ಯಾಂಗದ ಗುರಿಯಲ್ಲಿ ಸೂಚಿಸಲಾಗಿರುವಂತೆ, ರಾಷ್ಟ್ರೀಯ ಸೌಹಾರ್ದಕ್ಕೆ ಧಕ್ಕೆ ತಟ್ಟದಂತೆ, ಕೇಂದ್ರದೊಂದಿಗೆ ಪರಸ್ಪರ ತಿಳುವಳಿಕೆಯ ಬಾಂಧವ್ಯ ಇಟ್ಟುಕೊಂಡು, ಎಲ್ಲರಿಗೂ ಸಾಮಾಜಿಕ ನ್ಯಾಯ ದೊರಕಿಸಿಕೊಟ್ಟು. ರಾಜ್ಯದ ತೀವ್ರ ಆರ್ಥಿಕ ಗುರಿ ಸಾಧಿಸಲು ರಾಜ್ಯದ ಜನತಾ ಸರ್ಕಾರ ಬದ್ಧವಾಗಿದೆ ಎಂದು ಮುಖ್ಯಮಂತ್ರಿಯವರು ಹೇಳಿದ್ದಾರೆ.

ರಾಜ್ಯದ ಕಿಸೆಯಿಂದ ಹಣ ಕಳವು ಮಾಡುತ್ತಿರುವ ಕೇಂದ್ರದೊಂದಿಗೆ ಸೌಹಾರ್ದ ಭಾವನೆ, ಎಲ್ಲರಿಗೂ ಅಂದರೆ ಗುತ್ತೆದಾರಿ ಬಂಡವಾಳದಾರರಿಗೂ, ಭೂಮಾಲಿಕರಿಗೂ, ಭಟ್ಟಿಸೆರೆ ತಯಾರಕರಿಗೂ, ಇವರೆಲ್ಲರಡಿಯಲ್ಲಿ ಆಳಾಗಿ ದುಡಿಯುವ ಶ್ರಮಿಕರಿಗೂ ಸರಿಯಾದ ನ್ಯಾಯವಂತೆ ಇದು ಬರೇ ಬಂಡವಾಳಶಾಹಿ ಪಕ್ಷದ ದೃಷ್ಟಿಕೋನ, ಬಂಡವಾಳದಾರರ ಹಿತಚಿಂತನೆ ಮಾಡುವ ಧೋರಣೆ. ಆ ಕಾರಣದಿಂದಲೇ ಚೌಚೌ ಅಂದಾಜು ಪತ್ರಿಕೆ ಮಂಡಿಸಲಾಗಿದೆ.

ರೈತರಿಗೆ ರಿಯಾಯ್ತಿ

ಸಹಕಾರಿ ಸಂಘಗಳ ಸಾಲಗಳ ಮರುಪಾವತಿಯಲ್ಲಿ ರಿಯಾಯ್ತಿ, ಸರಕಾರಕ್ಕೆ ಸಂದಾಯವಾಗದೇ ಇರುವ ಸಾಲವನ್ನು ಮನ್ನಾ ಮಾಡುವುದು, ನೀರು ಸಿಗದ ಭಾವಿಗಳ ಸಂಬಂಧದಲ್ಲಿ ಸಹಾಯಧನ ಪಡೆಯುವ ಬಗ್ಗೆ ಕಾರ್ಯ ವಿಧಾನ ಸಡಿಲಗೊಳಿಸುವುದು, ಭೂ ಸಾರ ಮತ್ತು ಒಡ್ಡು ನಿರ್ಮಾಣ ಕಾರ್ಯದಲ್ಲಿಯ ಬಾಕಿಯಲ್ಲಿ ಶೇಖಡ 50 ರಷ್ಟನ್ನು ಮೂರು ಕಂತುಗಳಲ್ಲಿ (ವಾರ್ಷಿಕ) ಪಾವತಿ ಮಾಡಿದರೆ ಉಳಿದರ್ಧ ಸಾಲವನ್ನು ಮನ್ನಾ ಮಾಡುವುದು. ಕೃಷಿ

(8ನೇ ಪುಟ ನೋಡಿ)

ಸಂಪಾದಕೀಯ :

ದಕ್ಷಿಣ ವಲಯ ಮಂತ್ರಿಗಳ ಒಕ್ಕೂಟ - ಸ್ವಾಗತಾರ್ಹ ಹೆಜ್ಜೆ

ಪರಸ್ಪರ ಸಮಸ್ಯೆಗಳ ಇತ್ಯರ್ಥಕ್ಕೆ ಚರ್ಚೆ ಮಾಡಲು ಅನುಕೂಲವಾಗುವಂತೆ ಮತ್ತು ಬಾಂಧವ್ಯ ಅಭಿವೃದ್ಧಿಗೆ ನೆರವಾಗುವಂತೆ ದಕ್ಷಿಣ ರಾಜ್ಯಗಳ ಮುಖ್ಯಮಂತ್ರಿಗಳ ಮಂಡಳಿ ರಚಿಸಿಕೊಳ್ಳಬೇಕೆಂದು ಕರ್ನಾಟಕ, ಆಂಧ್ರ, ತಮಿಳುನಾಡು ಮತ್ತು ಪುದುಚೇರಿ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ನಿರ್ಣಯ ಕೈಗೊಂಡಿರುವುದು ಸ್ವಾಗತಾರ್ಹ. ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯವರಾದ ರಾಮಕೃಷ್ಣ ಹೆಗ್ಗಡೆಯವರ ಪ್ರಯತ್ನದಿಂದ ಈ ಸಭೆ ಬೆಂಗಳೂರಿನಲ್ಲಿ ನಡೆದು ಇಂಥ ನಿರ್ಧಾರ ಕೈಗೊಂಡಿದೆ.

ದಕ್ಷಿಣ ರಾಜ್ಯಗಳ ಈ ಯತ್ನವನ್ನು ಕೇಂದ್ರದ ವಿರುದ್ಧ ಸೆಣಸಾಟವೆಂದು ತಪ್ಪು ಕಲ್ಪನೆ ಮಾಡಬಾರದೆಂದೂ, ರಾಜ್ಯವನ್ನು ಬಲಪಡಿಸಿ ಸಮಸ್ಯೆಗಳನ್ನು ಬಗೆಹರಿಸುವ ಮೂಲಕ ಕೇಂದ್ರದ ಕೈ ಬಲಪಡಿಸುವುದೇ ಈ ನಿರ್ಣಯದ ಮೂಲ ಉದ್ದೇಶವೆಂದೂ ನಾಲ್ವರು ಮುಖ್ಯಮಂತ್ರಿಯವರೂ ಸ್ಪಷ್ಟಪಡಿಸಿದ್ದಾರೆ.

ಕೇರಳದ ಮುಖ್ಯಮಂತ್ರಿಯವರು ಇದರಲ್ಲಿ ಭಾಗವಹಿಸದಿರುವುದು ಗಮನಾರ್ಹ.

ಇಷ್ಟು ದಿವಸ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಮುಖಂಡತ್ವದ ಪಶ್ಚಿಮ ಬಂಗಾಲ, ತ್ರಿಪುರಾದಲ್ಲಿಯ ಎಡರಂಗ ಸರಕಾರ ಒಂದೇ ಹೆಚ್ಚಿನ ಹಣದ ಸಹಾಯಕ್ಕಾಗಿಯೂ ಸ್ವಾಯತ್ತತೆಗಾಗಿಯೂ ಕೇಂದ್ರದ ಜೊತೆಯಲ್ಲಿ ವಾದ ಮಾಡುತ್ತಿತ್ತು. ಈಗ ಕರ್ನಾಟಕ ಮತ್ತು ಆಂಧ್ರದಲ್ಲಿ ಕಾಂಗ್ರೆಸೇತರ ಸರಕಾರಗಳು ಅಧಿಕಾರಕ್ಕೆ ಬಂದಿರುವುದರಿಂದ ಹೊಸ ರಾಜಕೀಯ ಪರಿಸ್ಥಿತಿ ಉಂಟಾಗಿದೆ.

ರಾಜಕೀಯವಾಗಿ ನೋಡಿದರೆ ಈ ನಾಲ್ಕು ರಾಜ್ಯಗಳ ಮುಖ್ಯಮಂತ್ರಿಗಳು ಒಂದೇ ರಾಜಕೀಯ ಪಕ್ಷಕ್ಕೆ ಸೇರಿದವರಲ್ಲ. ಕರ್ನಾಟಕದಲ್ಲಿ ಜನತಾ ಪಕ್ಷ, ಆಂಧ್ರದಲ್ಲಿ ತೆಲಗುದೇಶಂ, ತಮಿಳು ನಾಡಿನಲ್ಲಿ ಎ.ಐ.ಡಿ.ಎಂ.ಕೆ. ಹಾಗೂ ಪುದುಚೇರಿಯಲ್ಲಿ ಡಿ. ಎಂ. ಕೆ. ಸರಕಾರಗಳಿವೆ. ಆದರೆ, ರಾಜ್ಯಗಳು ಎದುರಿಸುತ್ತಿರುವ ಕೆಲವು ಸಮಸ್ಯೆಗಳು ಮಾತ್ರ ಎಲ್ಲರಿಗೂ ಸಂಬಂಧಪಟ್ಟದ್ದಾಗಿದೆ. ಉದಾಹರಣೆಗಾಗಿ, ಈ ರಾಜ್ಯಗಳು ಅತ್ಯಾವಶ್ಯಕವಾಗಿ ಕೈಗೊಳ್ಳಬೇಕಾಗಿರುವ ಯೋಜನೆಗಳಿಗೆ ಬೇಕಾದ ಸಂಪನ್ಮೂಲ ಪ್ರಶ್ನೆ. ವಿದೇಶಗಳಿಂದ ಹಣ ಸಾಲ ಪಡೆಯುವ ಅಧಿಕಾರ, ದೇಶದಲ್ಲೇ ಸಾಲ ಎತ್ತುವ ಅಧಿಕಾರ ವಿದೇಶಿ ವಿನಿಮಯದಿಂದ ಹಣಗಳಿಸುವ ಅಧಿಕಾರ ಕೇಂದ್ರ ಸರಕಾರದ್ದೇ ಆಗಿದೆ ವಾರ್ಷಿಕ ಯೋಜನೆಗಳಿಗೆ ಧನಸಹಾಯ ರಾಜ್ಯಗಳಿಗೆ ಎಷ್ಟು ಕೊಡಬೇಕೆಂದು ನಿರ್ಣಯಿಸುವುದೂ ಕೇಂದ್ರ ಸರಕಾರ.

ಕೇಂದ್ರ ಸರಕಾರದ ಸಂಪತ್ತನ್ನು ರಾಜ್ಯಗಳೊಳಗೆ ಯಾವ ರೀತಿ ಹಂಚಬೇಕೆಂದು ವರದಿ ಮಾಡಲು ಕೇಂದ್ರ ಸರಕಾರ ವೈ. ಬಿ. ಚವಾಣ ಅವರ ಅಧ್ಯಕ್ಷತೆಯಲ್ಲಿ ಎಂಟನೇ ಹಣಕಾಸು ಆಯೋಗವನ್ನು ಸ್ಥಾಪಿಸಿದೆ, ಈ ಆಯೋಗದೆದರು ಬಲವಾದ ವಾದ ಹೂಡಿ ರಾಜ್ಯಗಳಿಗೆ ಹೆಚ್ಚು ಹಣ ಪಡೆಯುವ ಸಮಸ್ಯೆ ಈಗ ತ್ವರಿತವಾಗಿ ಎದುರಿಸುತ್ತಿದೆ. ಅದರಂತೆಯೇ ದಕ್ಷಿಣ ರಾಜ್ಯಗಳು ವಿದ್ಯುಚ್ಛಕ್ತಿ, ನೀರಿನಂತ ಗಂಭೀರ ಸಮಸ್ಯೆಗಳನ್ನೂ ಎದುರಿಸುತ್ತಿವೆ. ಸಾಕಷ್ಟು ವಿದ್ಯುಚ್ಛಕ್ತಿ ಇಲ್ಲದಿರುವುದರಿಂದ ಈ ರಾಜ್ಯಗಳ ಕೈಗಾರಿಕಾಭಿವೃದ್ಧಿಗೆ ದೊಡ್ಡ ಆತಂಕವಾಗಿದೆ. ಪ್ರತಿವರ್ಷ 6-7 ತಿಂಗಳು ಕಾರ್ಖಾನೆಗಳಲ್ಲಿ ಲೇ ಆಫ್ ಘೋಷಿಸಬೇಕಾಗುತ್ತದೆ, ಕೆಲವು ಪಾಳಿಗಳನ್ನು (ಶಿಫ್ಟ್) ನಿಲ್ಲಿಸಬೇಕಾಗುತ್ತದೆ, ಕಾರ್ಖಾನೆಗಳನ್ನೂ ನಿಲ್ಲಿಸುವಂಥ ಪರಿಸ್ಥಿತಿಯೂ ಬರುತ್ತದೆ. ಇದರಿಂದಾಗಿ ಕಾರ್ಖಾನೆದಾರರಿಗೂ, ಕಾರ್ಮಿಕರಿಗೂ ಹಾನಿಯಾಗುವುದಷ್ಟೇ ಅಲ್ಲ, ಸರಕಾರದ ಉತ್ಪನ್ನದಲ್ಲಿಯೂ ಕಡಿತ ಉಂಟಾಗುತ್ತದೆ,

ಉದಾಹರಣೆಗೆ ಹೋದ ವರ್ಷ ಕರ್ನಾಟಕ ಸರಕಾರದ ಆದಾಯದಲ್ಲಿ ರೂ. 8 ಕೋಟಿ ಹಾನಿಯಾಗಿದ್ದರೆ, ಉತ್ಪನ್ನ ದೃಷ್ಟಿಯಿಂದ ನೋಡಿದರೆ ಅದು ರೂ. 50 ಕೋಟಿಯಾಗುತ್ತದೆ. ಈ ವರ್ಷ ಪರಿಸ್ಥಿತಿ ಮತ್ತಷ್ಟು ಗಂಭೀರವಾಗಿದೆ. ಆಂಧ್ರ–ತಮಿಳುನಾಡು ಕೂಡಾ ಇಂಥದ್ದೇ ಸಂದಿಗ್ಧ ಪರಿಸ್ಥಿತಿಯನ್ನೆದುರಿಸುತ್ತಿವೆ.

ಈಗ ಈ ರಾಜ್ಯಗಳೆಲ್ಲ ಒಟ್ಟಾಗಿ ವಿಚಾರಮಾಡಿ, ಕೇಂದ್ರದ ಮೇಲೆ ಒತ್ತಾಯ ತಂದದ್ದಾದರೆ, ದಕ್ಷಿಣ ಭಾರತದಲ್ಲಿ ಒಂದೆರಡು

8ನೇ ಪುಟ ನೋಡಿ

ಮಾರ್ಚ್ 28 ನಿರುದ್ಯೋಗ ವಿರೋಧಿ ದಿನಾಚರಣೆ

ಅಸ್ಸಾಂ ದಾರುಣ ಸ್ಥಿತಿ:

ಪ್ರತ್ಯೇಕತಾವಾದಿ ಶಕ್ತಿಗಳ ವಿರುದ್ಧ ನೀತಿಬದ್ಧ ಹೋರಾಟ ಬೇಕು

ಕಳೆದ ಮೂರು ವರ್ಷಗಳಿಂದ "ವಿದೇಶಿಯರ" ವಿರುದ್ಧ ಚಳುವಳಿಯನ್ನು ವೀಕ್ಷಿಸುತ್ತಿರುವ ಅಸ್ಸಾಂ ಕಳೆದ ತಿಂಗಳು ಅನುಭವಿಸಬೇಕಾಗಿ ಬಂದ ಅತ್ಯಂತ ಅಮಾನವೀಯ, ಭಯಾನಕ 'ನರಮೇಧ ಇಡೀ ದೇಶವನ್ನೇ ಅಲುಗಾಡಿಸಿದೆ. ಕೋಮುಗಲಭೆಗಳ ಸಮಯದಲ್ಲಿ ಜನ ರಾಕ್ಷಸೀ ಪ್ರವೃತ್ತಿ ತೋರುವುದು ನಮಗೀಗ ಸುಪರಿಚಿತ ಸಂಗತಿಯೇ. ಆದರೆ ಅಸ್ಸಾಂನ ನೆಲ್ಲಿ ಎಂಬಲ್ಲಿ ನಡೆದ ಸಾಮೂಹಿಕ ನರಮೇಧ ಇವೆಲ್ಲವನ್ನೂ ಮೀರಿಸಿದೆ. ಆರುನೂರಕ್ಕೂ ಮಿಕ್ಕಿದ ಮುಸ್ಲಿಮರು,ರೈತರು,ಅವರ ಹೆಂಡಿರು ಮಕ್ಕಳನ್ನು ಆಹುತಿ ಪಡೆದ ಈ ಭೀಕರ ಘಟನೆ ಪೂರ್ವಯೋಜಿತವಾಗಿತ್ತು. ಸಾಂಪ್ರದಾಯಿಕ ಶಸ್ತ್ರಗಳನ್ನು ಮಾತ್ರವಲ್ಲ, ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಅಲ್ಲಿ ಉಪಯೋಗಿಸಲಾಗಿತ್ತು. ಆ ಹಳ್ಳಿಯ ನಿವಾಸಿಗಳನ್ನೆಲ್ಲಾ ಮುಗಿಸಿ ಬಿಡುವ ಯೋಜನೆ ಹಂತಕರದ್ದಿರಬೇಕು.

ಇನ್ನೊಂದು ಗಮನಾರ್ಹ ಸಂಗತಿಯೆಂದರೆ ವರದಿಗಳ ಪ್ರಕಾರ ಈ ಹತ್ಯಾಕಾಂಡ ನಡೆಸುವವರು ಆದಿವಾಸಿಗಳು – ಅಸ್ಸಾಂನಲ್ಲಿ ಕಾಂಗ್ರೆಸ್ (ಐ) ಆಳ್ವಿಕೆಯಲ್ಲಿ ಅತ್ಯಂತ ದಮನಕ್ಕೊಳಗಾದ ಇನ್ನೊಂದು ಜನವಿಭಾಗವಿದು ಈ ಘಟನೆ ಕಳೆದಮೂರು ವರ್ಷಗಳ ಚಳುವಳಿ ಈ ರಾಜ್ಯದಲ್ಲಿ ಎಂತಹ ವಿಷ ವಾತಾವರಣ ಸೃಷ್ಟಿಸಿದೆ ಎಂಬುದಕ್ಕೆ ಸಾಕ್ಷಿ. ಶೋಷಿತರ, ದಲಿತರ ಒಕ್ಕಟ್ಟಿನ ಬದಲು ಎಲ್ಲರೂ ಪ್ರತ್ಯೇಕತಾವಾದಿ ದೃಷ್ಟಿಯಿಂದಲೇ ಯೋಚಿಸಲಾರಂಭಿಸಿದ್ದಾರೆ. ಅಸ್ಸಾಂನ ಜನತೆ ಅಸ್ಸಾಂನ ಜನತೆಯ ಮೇಲೆಯೇ ಧಾಳಿ ನಡೆಸುತ್ತಿದೆ. ಅತ್ಯಂತ ಖೇದಕರ ಪರಿಸ್ಥಿತಿಯಿದು.

ಸಂಸತ್ತಿನ ಎರಡೂ ಸದನಗಳು ಈ ಘಟನೆಯಿಂದ ಬೆಚ್ಚಿ ಬಿದ್ದು ಶಾಂತಿ ಕಾಯ್ದುಕೊಳ್ಳುವಂತೆ ಅಸ್ಸಾಂ ಜನತೆಗೆ ಮನವಿ ಮಾಡುವ ಠರಾವುಗಳನ್ನು ಅಂಗೀಕರಿಸಿವೆ. ಇದು ಸ್ವಾಗತಾರ್ಹವೆಂಬುದರಲ್ಲಿ ಸಂಶಯವಿಲ್ಲ. ಆದರೆ ಈ ಠರಾವಿಗೆ ಬೆಂಬಲ ನೀಡಿದವರಲ್ಲಿ ಕೆಲವರು ಅಸ್ಸಾಂನ ಶಾಂತಿ, ನೆಮ್ಮದಿ ಕೆಡಲು ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಜವಾಬ್ದಾರರು ಎಂಬ ಸತ್ಯಸಂಗತಿಯನ್ನು ನಾವು ಮರೆಯಲು ಸಾಧ್ಯವಿಲ್ಲ. ಅಲ್ಲದೆ ಕಳೆದ ಮೂರು ವರ್ಷಗಳಿಂದ ಅಖಿಲ ಅಸ್ಸಾಂ ವಿದ್ಯಾರ್ಥಿ ಸಂಘ (AASU) ಹಾಗೂ ಗಣಸಂಗ್ರಾಮ ಪರಿಷದ್ (AAGSP) ಈ ಚಳುವಳಿಯನ್ನು ನಡೆಸಿಕೊಂಡುಬಂದ ವೈಖರಿ ತಿಳಿದವರಿಗೆ ಈ ಘಟನೆ ಅನಿರೀಕ್ಷಿತವೇನೂ ಅಲ್ಲ.

ಪ್ರತ್ಯೇಕತಾವಾದಿ ಬೇಡಿಕೆ

ಗಡಿರಾಜ್ಯವಾದ ಅಸ್ಸಾಂನಲ್ಲಿ ವಿದೇಶಿಯರ ಸಮಸ್ಯೆ ಇಲ್ಲವೇ ಇಲ್ಲವೆಂದು ಇದರರ್ಥವಲ್ಲ. ಆದರೆ ಪ್ರತ್ಯೇಕತಾವಾದಿಗಳು ತಮ್ಮ ಬೇಳೆ ಬೇಯಿಸಿಕೊಳ್ಳಲು ಈ ಸಮಸ್ಯೆಯನ್ನು ಬೇಕೆಂದೇ ಉಲ್ಬಣಗೊಳಿಸಿದ್ದಾರೆ. 1947 ರ ವಿಭಜನೆ, ನಂತರ ಬಾಂಗ್ಲಾ ದೇಶ ಘಟನೆಯ ಸಮಯದಲ್ಲಿ ಸಾವಿರಾರು ವಲಸೆಗಾರರ ಸಮಸ್ಯೆಯನ್ನು ಎಲ್ಲಾ ಗಡಿರಾಜ್ಯಗಳು ಎದುರಿಸಬೇಕಾಯಿತು. ಪಶ್ಚಿಮ ಬಂಗಾಳ ರಾಜ್ಯ ಇವುಗಳಲ್ಲಿ ಅತ್ಯಂತ ಹೆಚ್ಚಿನ ಹೊರೆ ಹೊರಬೇಕಾಗಿ ಬಂತು. ಅಸ್ಸಾಂಗೂ ಈ ಹೊರೆ ಬಿದ್ದಿತು. ಈ ರೀತಿ ವಲಸೆ ಬಂದವರಲ್ಲಿ ಹೆಚ್ಚಿನವರು ನಿಸ್ಸಹಾಯಕ ಬಡ ಹಿಂದೂಗಳು. ಅವರು ಅಸ್ಸಾಂಗೆ ಬಂದು ನೆಲೆಸಿ ಈಗ ಕನಿಷ್ಟ ಒಂದು ದಶಕವಾದರೂ ಕಳೆದಿದೆ. ಇನ್ನು ಕೆಲವರಂತೂ ಸ್ವಾತಂತ್ರ್ಯ ದೊರೆತಾಗಿನಿಂದ ಈ ರಾಜ್ಯದಲ್ಲಿ ನೆಲೆಸಿದ್ದಾರೆ. ಅಸ್ಸಾಂನಲ್ಲಿ ನೆಲೆಸಿರುವ ಮುಸ್ಲಿಮರು ಈಗಾಗಲೇ ಪೌರತ್ವದ ಹಕ್ಕುಗಳನ್ನು ಗಳಿಸಿದ್ದಾರೆ. ಇವರಲ್ಲದೆ ಪಕ್ಕದ ಬಿಹಾರ, ಒರಿಸ್ಸಾ ರಾಜ್ಯಗಳಿಂದ ಇಲ್ಲಿಗೆ ಬಂದು ನೆಲೆಸಿದ್ದಾರೆ. ಇವರು ಭಾರತದ ನಾಗರಿಕರಾದ್ದರಿಂದ ಅವರಿಗೆ ಅಸ್ಸಾಂನಲ್ಲಿರಲು ಎಲ್ಲಾ ಹಕ್ಕು ಇದೆ. ಆದರೆ AASU, AAGSP ಪ್ರಕಾರ ಇವರೆಲ್ಲಾ ವಿದೇಶಿಯರು. ಸುಮಾರು 47 ಲಕ್ಷವಿರುವ ಇವರನ್ನೆಲ್ಲಾ ಹೊರದಬ್ಬಬೇಕು ಇಲ್ಲವೇ ಅವರ ಮತದಾನದ ಹಕ್ಕನ್ನು ಕಸಿದುಕೊಳ್ಳಬೇಕು. ಇದು ಹಲವು ಜನಾಂಗೀಯ, ಭಾಷಿಕ ಗುಂಪುಗಳಿಂದ ಸೇರಿದ ಭಾರತದ ಐಕ್ಯತೆಯನ್ನೇ ನಿರಾಕರಿಸಿದಂತಲ್ಲವೇ ? ಈ ಚಳುವಳಿಗಾರರಿಗೆ ಅಸ್ಸಾಂನ ಶೋಷಿತ, ದಲಿತರ ಹಕ್ಕುಗಳ ಬಗ್ಗೆ ಯಾವ ಕಾಳಜಿಯೂ ಇಲ್ಲ. ಅವರೆಲ್ಲಾ 'ವಿದೇಶಿಯರು'. ಆದರೆ ಅವರನ್ನು ಸುಲಿಯುವ ಬ್ರಿಟಿಷ್ ಪ್ಲಾಂಟರುಗಳು ಮಾತ್ರ ಇವರ ಗೆಳೆಯರು. ಆದ್ದರಿಂದಲೇ ಇದೊಂದು ಪ್ರತ್ಯೇಕತಾವಾದಿ ಚಳುವಳಿಯೇ ಹೊರತು, ಅಸ್ಸಾಂನ ವಿಶಿಷ್ಟತೆ, ಸಂಸ್ಕೃತಿಯನ್ನು ಕಾಯ್ದುಕೊಳ್ಳುವ ಚಳುವಳಿಯಲ್ಲ ಎಂಬುದು ಸ್ಪಷ್ಟ. AASU, ಹಾಗೂ AAGSP ನಿಜವಾಗಿಯೂ ಅಸ್ಸಾಂನ ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತಿದ್ದರೆ ಮೊನ್ನೆ ನಡೆದ ಚುನಾವಣೆಯಲ್ಲಿ ಭಾಗವಹಿಸಿ ತಮ್ಮ ಶಕ್ತಿ ಪ್ರದರ್ಶಿಸಬಹುದಾಗಿತ್ತು.

1979 ರಲ್ಲಿ ಈ ಚಳವಳಿ ಆರಂಭವಾದಾಗ ಅದರ ಹಿನ್ನೆಲೆಯಲ್ಲಿದ್ದುದು ರಾಜಕೀಯ ಕಾರಣಗಳೇ ಹೊರತು ಸಾಂಸ್ಕೃತಿಕ ಪ್ರಶ್ನೆಗಳಲ್ಲ. 1978 ರಲ್ಲಿ ಅಸ್ಸಾಂನಲ್ಲಿ ಎಡಶಕ್ತಿಗಳು ಒಂದಿಷ್ಟು ಸ್ಥಾನಗಳನ್ನು ಗೆದ್ದುಕೊಂಡ ನಂತರ ಪಶ್ಚಿಮ ಬಂಗಾಲದಲ್ಲಿ ಎಡರಂಗ ಸರಕಾರ ರಚನೆಗೊಂಡ ನಂತರ, ಅಂದರೆ ಬಾಂಗ್ಲಾದೇಶ್ ಯುದ್ಧವಾದ 9 ವರ್ಷಗಳ ನಂತರ ಈ ಚಳವಳಿ ಒಮ್ಮಿಂದೊಮ್ಮೆಲೇ ಹುಟ್ಟಿಕೊಂಡಿತು. ಈಶಾನ್ಯ ಪ್ರದೇಶಗಳಲ್ಲಿ ಅಸ್ಥಿರತೆ ಉಂಟು ಮಾಡಿ ದೇಶವನ್ನು ಹೋಳು ಮಾಡುವ ಸಂಚಿನಲ್ಲಿ ನಿರತವಾದ ಸಿ. ಐ. ಎ. ಹಾಗೂ ಇತರ ಸಂಸ್ಥೆಗಳ ರಹಸ್ಯ ದಾಖಲೆ "ಆಪರೇಶನ್ ಬ್ರಹ್ಮಪುತ್ರಾ" ಕಾರ್ಯರೂಪಕ್ಕಿಳಿದದ್ದು ಇದೇ ಸುಮಾರಿಗೆ. ಮಣಿಪುರದ ಪಿ. ಎಲ್. ಎ., ಮಿಜೋರಾಂನ ಎಂ. ಎನ್. ಎಫ್, ತ್ರಿಪುರಾದ ಟಿ. ಯು. ಜೆ. ಎಸ್., ಅಸ್ಸಾಂನ ಎ.ಎ.ಎಸ್.ಯು., ನಕ್ಸಲೀಯರೆಂದು ಹೇಳಿಕೊಳ್ಳುವವರು ಇತ್ಯಾದಿಯವರ ಚಟುವಟಿಕೆಗಳು ಪರಸ್ಪರ ಸಂಬಂಧ ಹೊಂದಿವೆ. ಇವರೆಲ್ಲರೂ ತಮ್ಮ ದಾಳಿಗಳಲ್ಲಿ ಅತ್ಯಾಧುನಿಕ ಸ್ಟೆನ್‌ಗನ್‌ಗಳನ್ನು ಉಪಯೋಗಿಸುವುದು. ಕಂಡು ಬಂದಿದೆ.

ಕಾಂಗ್ರೆಸ್ (ಐ)ನ ನಾಚಿಕೆಗೇಡಿನ ವರ್ತನೆ

ಪ್ರತ್ಯೇಕತಾವಾದಿ ಚಳವಳಿಗಾರರ ಹಠಮಾರಿತನದೊಂದಿಗೆ ಸಮಸ್ಯೆಯನ್ನು ಮತ್ತಷ್ಟು ಹದಗೆಡಿಸುವಲ್ಲಿ ಕಾಂಗ್ರೆಸ್ (ಐ) ವಹಿಸಿದ ಪಾತ್ರ ಅತ್ಯಂತ ನಾಚಿಕೆಗೇಡಿನದು. ಮೊದಲಿಗೆ ಇಂತಹ ಸಮಸ್ಯೆಗಳು ಉದ್ಭವಿಸಿರುವುದೇ ಈ ಪಕ್ಷದ ಅಯೋಗ್ಯ ಆಳ್ವಿಕೆಯ ಫಲವಾಗಿ. ಸಮಸ್ಯೆ ಭುಗಿಲೆದ್ದಾಗಲೂ ಅದು ವಿಚ್ಛಿದ್ರಕಾರೀ ಶಕ್ತಿಗಳ ವಿರುದ್ಧ ಜನಾಭಿಪ್ರಾಯ ಸಂಘಟಿಸಲು ಕಳೆದ ಮೂರು ವರ್ಷಗಳಲ್ಲಿ ಏನೂ ಮಾಡಲಿಲ್ಲ. ಪರಿಸ್ಥಿತಿಯ ಅಪಾಯದ ಬಗ್ಗೆ ದೇಶವನ್ನು ಜಾಗೃತಗೊಳಿಸಲಿಲ್ಲ; ಅಮೇರಿಕನ್ ಸಾಮ್ರಾಜ್ಯ ಶಾಹಿಗಳ ಕೈವಾಡವಿದೆಯೆಂದು ಗೊತ್ತಿದ್ದರೂ ಸತ್ಯವನ್ನು ಸಾರುವ ಧೈರ್ಯ ಅದಕ್ಕೆ ಬರಲಿಲ್ಲ. ಬದಲಾಗಿ, ಪರಿಸ್ಥಿತಿಯ ದುರ್ಲಾಭ ಪಡೆಯುವ ಆಸೆಬುರುಕತನವನ್ನು, ಸಂಕುಚಿತ ಸ್ವಾರ್ಥ ಬುದ್ಧಿಯನ್ನಷ್ಟೆ ಅದು ಪ್ರದರ್ಶಿಸಿತು. ಅದು ರಾಜ್ಯದ ವಿಧಾನ ಸಭೆಯಲ್ಲಿ ಕೇವಲ ಎಂಟರಲ್ಲಿದ್ದ ತನ್ನ ಸೀಟುಗಳ ಸಂಖ್ಯೆಯನ್ನು ಕೆಲವು ಎಂ.ಎಲ್.ಎ.ಗಳನ್ನು ಕ್ರಯ ಕೊಟ್ಟು ಪಡೆದು 53ಕ್ಕೇರಿಸಿ ರಾಜ್ಯದ ಮೇಲೆ ತನ್ನ ಅಲ್ಪಮತ ಸರಕಾರವನ್ನು ಹೇರಲು ಯತ್ನಿಸಿ ವಿಫಲಗೊಂಡಾಗ ರಾಷ್ಟ್ರಪತಿ ಆಳ್ವಿಕೆ ಜಾರಿಗೆ ಬಂತು. ನಂತರದ ಒಂದು ವರ್ಷದ ಸಮಯದಲ್ಲಿ ಅಸ್ಸಾಂ ಜನಸಾಮಾನ್ಯರ ನಡುವೆ ಹೆಚ್ಚುತ್ತಿರುವ ಎಡಶಕ್ತಿಗಳ ಪ್ರಭಾವವನ್ನು ಕುಗ್ಗಿಸಲು ಅದು ತಳೆದ ಸಮಯ ಸಾಧಕ ನೀತಿಯಿಂದಾಗಿ ಸಮಸ್ಯೆ ಬಗೆಹರಿಯುವ ಲಕ್ಷಣಗಳೇ ಕಾಣದಾದಾಗ ರಾಷ್ಟ್ರಪತಿ ಆಳ್ವಿಕೆಯನ್ನು ವಿಸ್ತರಿಸಲು ಅನುಕೂಲವಾಗುವಂತೆ ಸಂವಿಧಾನವನ್ನು ತಿದ್ದುಪಡಿ ಮಾಡಿ ಪರಿಸ್ಥಿತಿಯ ಮತ್ತಷ್ಟು ದುರ್ಲಾಭ ಪಡೆಯಲು ಪ್ರಯತ್ನಿಸಿತು. ಪರಿಸ್ಥಿತಿ ಹತೋಟಿ ಮೀರಿದಾಗ ಜನತೆಯ ದಮನಕಾರೀ ಕ್ರಮಗಳನ್ನು ಕೈಗೊಂಡು ಜನತೆ ಮತ್ತಷ್ಟು ಆಕ್ರೋಶಗೊಳ್ಳುವಂತೆ ಅದು ಮಾಡಿತು. ಇತ್ತೀಚಿನ ಚುನಾವಣೆಯ ಘೋಷಣೆಯಾದ ನಂತರ ನೂರಕ್ಕೂ ಹೆಚ್ಚು ಜನ ಪೋಲೀಸರ ಗುಂಡುಗಳಿಗೆ ಬಲಿಯಾಗಿದ್ದಾರೆ. ಕಾಂಗ್ರೆಸ್ (ಐ)ನ ಈ "ಉಜ್ವಲ" ದಾಖಲೆಯೊಂದಿಗೆ ಅದು ಇತ್ತೀಚಿನ ಚುನಾವಣೆಗಳಲ್ಲಿ ಸಾಧಿಸಿದ "ಭಾರೀ ವಿಜಯ"ವನ್ನು ಹೋಲಿಸಿದರೆ ಅದರ ಸಮಯ ಸಾಧಕ ಪ್ರವೃತ್ತಿ ಅರ್ಥವಾಗುತ್ತದೆ.

ಬೂರ್ಜ್ವಾ ವಿರೋಧ ಪಕ್ಷಗಳೂ ಹೊಣೆ

ಕಾಂಗ್ರೆಸ್ (ಐ)ನ ಪಾತ್ರ ಹೀಗಾದರೆ ಇತರ ಬೂರ್ಜ್ವಾ ಪಕ್ಷಗಳಾದ ಬಿ.ಜೆ.ಪಿ. ಹಾಗೂ ಜನತಾ, ಲೋಕದಳಗಳೂ ಅಸ್ಸಾಂನ ದಾರುಣ ಪರಿಸ್ಥಿತಿಯ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅವುಗಳ ನಿಲುವು ಕೇವಲ ಬೇಜವಾಬ್ದಾರಿತನದ್ದು ಮಾತ್ರವಲ್ಲ, ನಾಚಿಕೆಗೇಡು, ವಿಚ್ಛಿದ್ರಕಾರಿ ಹಾಗೂ ಕ್ರಿಮಿನಲ್ ಕೂಡಾ. ತಮ್ಮನ್ನು ಪ್ರತ್ಯೇಕತಾವಾದಿ ಚಳವಳಿಗಾರರಿಗೆ ಮಾರಿಕೊಂಡ ಈ ಜನರ ಅನೀತಿಯುತ ಸಮಯ ಸಾಧಕತನ ಯಾವ ಮಟ್ಟ ತಲುಪಿದೆಯೆಂದರೆ ನೆಲ್ಲಿ ಹಾಗೂ ಇತರೆಡೆ ಚಳವಳಿಗಾರರು ನಡೆಸಿದ ಅಮಾನುಷ ಕೊಲೆಗಡುಕತನವನ್ನು ಖಂಡಿಸುವ ಗೋಜಿಗೂ ಇವರು ಹೋಗಲಿಲ್ಲ. ಮಾನವೀಯತೆಯ ಬಗ್ಗೆ ಅತ್ಯಂತ ತಿರಸ್ಕಾರ ನಿಲುವಿದು.

ಬಿ. ಜೆ. ಪಿ.ಯ ರಾಷ್ಟ್ರವಿರೋಧೀ ಹಾಗೂ ಕೋಮುವಾದಿ ಧೋರಣೆಗಳಂತೂ ಇದರಲ್ಲಿ ಜಗಜ್ಜಾಹೀರುಗೊಂಡಿದೆ. ಅದರ ಅಧ್ಯಕ್ಷ ವಾಜಪೇಯಿಯವರ ಪ್ರಕಾರ ಅಸ್ಸಾಂಗೆ ವಲಸೆ ಬಂದ ಮುಸ್ಲಿಮರೆಲ್ಲಾ ವಿದೇಶೀಯರು, ಕಳ್ಳತನದಿಂದ ಬಂದವರು. ಅವರನ್ನೆಲ್ಲಾ ಹೊರದಬ್ಬಬೇಕು. ಹಿಂದೂ ವಲಸೆಗಾರರೆಲ್ಲಾ ನಿರಾಶ್ರಿತರು, ಅವರಿಗೆ ಮತದಾನದ ಹಕ್ಕು ಕೊಡಬಾರದು. ತಾನು ಕಾಂಗ್ರೆಸ್ (ಐ)ಗೆ ಏಕಮಾತ್ರ ರಾಷ್ಟ್ರೀಯ ಪರ್ಯಾಯವೆಂದು ಬಲವಾಗಿ ನಂಬಿರುವ ಪಕ್ಷದ ನಿಲುವಿದು ! ಅದರ 'ಅಖಂಡ ಭಾರತ'ದ ಕಲ್ಪನೆಯಲ್ಲಿ ಭಾರತ, ಪಾಕಿಸ್ತಾನ, ಬಾಂಗ್ಲಾದೇಶ ಮಾತ್ರವಲ್ಲ ಇಂಡೋನೇಷ್ಯವೂ ಸೇರಿದೆ. ಆದರೆ ಅಸ್ಸಾಂನಲ್ಲಿ ವಾಜಪೇಯಿಯವರು ಸ್ವತಃ ಭಾಗವಹಿಸಿದ್ದ ಸಭೆಯಲ್ಲೇ ಚಳವಳಿಗಾರರು "ಅಸ್ಸಾಂ ನಮ್ಮ ತಾಯ್ನೆಲ. ಉಳಿದವರೆಲ್ಲರೂ ವಿದೇಶೀಯರು" ಎಂದು ಘೋಷಿಸುವಾಗ ಅವರ ಬೆನ್ನು ಚಪ್ಪರಿಸುತ್ತಾರೆ ಈ 'ಅಖಂಡ'ವಾದಿ. ಜನತಾಪಕ್ಷವೂ ದುರದೃಷ್ಟವಶಾತ್ ಬಿ. ಜೆ. ಪಿ.ಯ ಈ ಅಪಾಯಕಾರಿ ರಾಷ್ಟ್ರವಿರೋಧಿ, ಕೋಮುವಾದಿ ನಿಲುವನ್ನೇ ನಕಲು ಮಾಡುತ್ತಿದೆ.

ಎಡಶಕ್ತಿಗಳ ನೀತಿಬದ್ಧ ಹೋರಾಟ

ಇಂತಹ ವಿಷ ವಾತಾವರಣದಲ್ಲಿ ದೇಶದ ಸಮಗ್ರತೆ, ಅಸ್ಸಾಮಿಗಳ ಐಕ್ಯತೆ ಹಾಗೂ ಅಸ್ಸಾಂನ ಎಲ್ಲಾ ಶ್ರಮಜೀವಿಗಳ ಐಕ್ಯತೆ ಹಾಗೂ ಹಕ್ಕುಗಳಿಗಾಗಿ ತಮ್ಮ ಜೀವಗಳನ್ನೇ ಪಣವೊಡ್ಡಿ ನೀತಿಬದ್ಧ ಹೋರಾಟ ನಡೆಸಿದವರೆಂದರೆ ಎಡ ಪಕ್ಷಗಳಿಗೆ, ಎಡ ಸಂಘಟನೆಗಳಿಗೆ ಸೇರಿದ ಕಾರ್ಯಕರ್ತರು ಮಾತ್ರ. ಈ ಹೋರಾಟದಲ್ಲಿ ಸಿ. ಪಿ. ಐ. (ಎಂ), ಸಿ.ಪಿ.ಐ. ಹಾಗೂ ಇತರ ಸಾಮೂಹಿಕ ಸಂಘಟನೆಗಳು ತಮ್ಮ ಹಲವಾರು ಅಮೂಲ್ಯ ಕಾರ್ಯಕರ್ತರನ್ನು ಕಳೆದುಕೊಳ್ಳಬೇಕಾಯಿತು. ಆದ್ದರಿಂದಲೇ ಪ್ರತ್ಯೇಕತಾವಾದಿಗಳಿಗೆ ಇವರು ಪ್ರಥಮ ವೈರಿ. ಕಾಂಗ್ರೆಸ್ (ಐ) ಆಡಳಿತದಿಂದ ಏನೊಂದೂ ರಕ್ಷಣೆಯಿಲ್ಲದೆ ತಮ್ಮ ನೀತಿಬದ್ಧ ಹೋರಾಟವನ್ನು ಮುಂದುವರಿಸುತ್ತಿರುವ ಅಸ್ಸಾಂನ ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ದೇಶದ ಸಮಗ್ರತೆಯನ್ನು ಇದುವರೆಗೆ ಕಾಪಾಡಿದ ಕೀರ್ತಿ ಸಲ್ಲಬೇಕು.

ಸಮಸ್ಯೆಯ ಪರಿಹಾರದ ಬಗ್ಗೆ ಸಿ.ಪಿ.ಐ. (ಎಂ) ಸರಿಯಾದ ನಿಲುವು ತಾಳಿದೆ. 1971 ನ್ನು ಆಧಾರ ವರ್ಷವೆಂದು ಪರಿಗಣಿಸಿ ಅದರ ನಂತರ ವಲಸೆ ಬಂದವರ ತನಿಖೆ ನಡೆಸಿ, ಅವರು ಪೌರತ್ವವನ್ನು ಇದುವರೆಗೆ ಪಡೆದಿರದಿದ್ದರೆ ಅವರನ್ನು ವಾಪಸು ಕಳಿಸಬೇಕು. ಇನ್ನು ಮುಂದೆ ಅಸ್ಸಾಂನೊಳಗೆ ಕಳ್ಳ ಪ್ರವೇಶ ನಡೆಯದಂತೆ ಬಿಗಿ ಕ್ರಮ ಕೈಗೊಳ್ಳಬೇಕು. ಆಗ ಮಾತ್ರ ಸಮಸ್ಯೆ ಪರಿಹಾರ ಕಾಣಬಹುದು. ಅಸ್ಸಾಂನ ಯಾವುದೇ ಜನ ವಿಭಾಗದ ಹಕ್ಕುಗಳನ್ನು ಕಸಿದುಕೊಂಡು ಸಮಸ್ಯೆಯನ್ನು ಪರಿಹರಿಸುವುದು ಸಾಧ್ಯವಿಲ್ಲ.

ನೆಲ್ಲಿ ನರಮೇಧ ಎಲ್ಲಾ ರಾಜಕೀಯ ಪಕ್ಷಗಳ ಕಣ್ಣು ತೆರೆಸುವಂತಾದರೆ ಈ ಸಮಸ್ಯೆಯ ಕುರಿತು ಫಲಪ್ರದ ಮಾತುಕತೆ ಸಾಧ್ಯ. ಈ ಮಾತುಕತೆಗಳಲ್ಲಿ ಕೇವಲ AASU, AAGSP ಪ್ರತಿನಿಧಿಗಳು ಮಾತ್ರವಲ್ಲ ಅಸ್ಸಾಂನ ಎಲ್ಲಾ ಜನ ವಿಭಾಗಗಳ ಪ್ರತಿನಿಧಿಗಳ್ ಭಾಗವಹಿಸುವಂತಾಗಬೇಕು.

★



ಕಾಮ್ರೇಡ್ ಎ. ಕೆ. ಜಿ.

ಒಂದು ಮರೆಯಲಾಗದ ನೆನಪು

ಭಾರತದ ಶ್ರಮಜೀವಿ ಹೋರಾಟದ ಸರ್ವಶ್ರೇಷ್ಠ ನಾಯಕರಾದ ಕಾ. ಎ.ಕೆ. ಗೋಪಾಲನ್‌ರವರು ನಮ್ಮಿಂದ ಮರೆಯಾಗಿ ಮಾರ್ಚ್ ೨೨ಕ್ಕೆ ಸರಿಯಾಗಿ ೬ ವರ್ಷಗಳಾಗುತ್ತವೆ. ಅವರ ಸ್ಮರಣ ದಿನವನ್ನು ನಾಡಿನುದ್ದಗಲಕ್ಕೂ ಇರುವ ತುಳಿತಕ್ಕೊಳಪಟ್ಟ ಜನಾಂಗ ಗೌರವ ಪೂರ್ವಕವಾಗಿ ಆಚರಿಸುತ್ತದೆ. ಅವರ ಭೌತ ಶರೀರ ನಮ್ಮಿಂದ ಮರೆಯಾಗಿದ್ದರೂ ಕೂಡ ಅವರ ಸಾಧನೆಗಳು ನಮ್ಮ ಸ್ಮರಣೆಯಲ್ಲಿ ಸದಾಕಾಲ ಉಳಿದಿರುತ್ತದೆ. ಅವರ ಜೀವನದ ವೀರಗಾಥೆ ಹೋರಾಟಗಾರರ ಸ್ಫೂರ್ತಿ ಚಿಲುಮೆ.

1904ರ ಅಕ್ಟೋಬರ್ 1ರಂದು ಜನಿಸಿದ ಕಾ. ಎ. ಕೆ. ಜಿ. ಅತ್ಯಂತ ಕಿರಿಯ ವಯಸ್ಸಿನಲ್ಲೇ ಹೋರಾಟದ ಪ್ರಜ್ಞೆಯನ್ನು ಬೆಳೆಸಿಕೊಂಡವರು. ತಲಚೇರಿಯ ಮಿಶನ್ ಹೈಸ್ಕೂಲ್ ಮತ್ತು ಬ್ರೆನ್ನನ್ ಕಾಲೇಜಿನಲ್ಲಿ ಶಿಕ್ಷಣ ಪಡೆದು ಅಧ್ಯಾಪಕ ವೃತ್ತಿಯನ್ನು ಸ್ವೀಕರಿಸಿದ ಎ. ಕೆ. ಜಿ. ಆದರ್ಶ ಶಿಕ್ಷಕರೆಂದು ಹೆಸರಾದವರು.

ಗುರುವಾಯೂರು ದೇವಸ್ಥಾನ ಪ್ರವೇಶದ ಚಳವಳಿಯಲ್ಲಿ ಭಾಗವಹಿಸಿದ ಕಾ. ಎ.ಕೆ.ಜಿ. 1920ರ ನಂತರ ನಡೆದ ಎಲ್ಲಾ ರಾಜಕೀಯ, ಸಾಮಾಜಿಕ ಹೋರಾಟಗಳಲ್ಲೂ ಭಾಗವಹಿಸಿದ್ದರ ಜೊತೆಗೆ ಸ್ವಾತಂತ್ರ್ಯ ಹೋರಾಟದಲ್ಲಿ ಅತ್ಯಂತ ತೀವ್ರವಾಗಿ ಪಾಲ್ಗೊಂಡರು.

ತಮ್ಮ ಜೀವನದ ಬಹು ಭಾಗವನ್ನು ಜೈಲುಗಳಲ್ಲಿ ಸವೆಸಿದ ಈ ಮಹಾನ್ ಹೋರಾಟಗಾರ ಜೈಲುಗಳ ಒಳಗಿನ ಅವ್ಯವಸ್ಥೆ, ಅನ್ಯಾಯಗಳ ವಿರುದ್ಧ ನಡೆಸಿದ ಹೋರಾಟಗಳು ರೋಮಾಂಚಕಾರೀ ಘಟನೆಗಳಾಗಿವೆ.

ತೀರಾ ಕೆಳವರ್ಗದ ಜನತೆಯ ಪ್ರೀತಿ ಪಾತ್ರ ನಾಯಕರಾಗಿ ಅವರು ನಡೆಸಿರುವ ಹೋರಾಟಗಳು ಕೈಗೊಂಡ ಸತ್ಯಾಗ್ರಹಗಳು, ಉಪವಾಸಗಳು ಕೇರಳದ ಹಾಗೂ ದೇಶದ ಮೂಲೆ ಮೂಲೆಗಳಲ್ಲಿ ಸಂಚರಿಸಿ ಅವರು ಮಾಡಿದ ಭಾಷಣಗಳು ಅಸಂಖ್ಯ. 1952 ರಿಂದ 1977ರವರೆಗೂ ಲೋಕಸಭಾ ಸದಸ್ಯರಾಗಿ ಉಳಿದಿದ್ದ ಕಾ. ಎ. ಕೆ. ಜಿ. ಪಾರ್ಲಿಮೆಂಟಿನಲ್ಲಿ ಆಳುವ ವರ್ಗವನ್ನು ನಡುಗಿಸುತ್ತಿದ್ದ ಧೀಮಂತ ಸಂಸತ್ಪಟು ಆಗಿದ್ದರು. ತಮ್ಮ ಜೀವಿತದ ಕೊನೆಯವರೆಗೂ ಸಿ.ಪಿ.ಐ. (ಎಂ.)ನ ಪೊಲಿಟ್ ಬ್ಯೂರೋ ಸದಸ್ಯರಾಗಿದ್ದ ಕಾ. ಎ. ಕೆ. ಜಿ. ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷರಾಗಿಯೂ ಉಳಿದಿದ್ದರು.

ಕಾ. ಎ. ಕೆ. ಜಿ.ಯವರ 6ನೆಯ ಸ್ಮರಣ ದಿನವನ್ನು ಆಚರಿಸುವ ಈ ಸಂದರ್ಭದಲ್ಲಿ ಕ್ರಾಂತಿಕಾರೀ ಚಳವಳಿಗೆ ಅವರು ಸಲ್ಲಿಸಿದ ಮಹಾನ್ ಕೊಡುಗೆಯನ್ನು ಸ್ಮರಿಸುತ್ತಾ, ಅವರ ಹೋರಾಟದ ಗುರಿಯತ್ತ ನಾವೆಲ್ಲರೂ ಧೈರ್ಯದಿಂದ ಮುಂದೆ ಸಾಗೋಣ.

ಇದೊಂದೇ ನಾವು ಎ. ಕೆ. ಜಿ. ಅವರಿಗೆ ಸಲ್ಲಿಸಬಹುದಾದ ಉನ್ನತ ಜಲಿಯಾಗಬಲ್ಲದು.

ಕರ್ನಾಟಕ ರಾಜ್ಯ ಬೀಡಿ ವರ್ಕರ್ಸ್ ಫೆಡರೇಶನಿನ ನಿರ್ಣಯ

ಹಿಂದಿನ ಕಾಂಗ್ರೆಸ್ ಸರಕಾರವು ಕರ್ನಾಟಕದ 6 ಲಕ್ಷ ಬೀಡಿ ಮಜ್ದೂರರಿಗೆ ಕನಿಷ್ಠ ವೇತನ ನಿರ್ಣಯ ಮಾಡುವಾಗ ಅನ್ಯಾಯ ಮಾಡಿದೆ. ಕರಡು ಪ್ರಕಟಣೆಯಲ್ಲಿ ರೂ. 8–10 ಎಂದು ಪ್ರಕಟಿಸಿ ಕಡೆಗೆ ಏಕ ಪಕ್ಷೀಯವಾಗಿ ರೂ. 7-40 ಎಂದು ಪ್ರಕಟಿಸಿ, ವರ್ಷಂಪ್ರತಿ ಇದನ್ನು ಪರಿಷ್ಕರಿಸುವ ಮೋಸದ ಭರವಸೆ ಕೊಟ್ಟು ಬೀಡಿ ಮಜ್ದೂರರಿಗೆ ಮೋಸ ಮಾಡಿದೆ, ಇದನ್ನೆಲ್ಲಾ ಚರ್ಚಿಸಿ, ತಾ. 20–3–1983 ರಂದು ಮಂಗಳೂರಿನಲ್ಲಿ ಸೇರಿದ್ದ ರಾಜ್ಯದ ಬೀಡಿ ಫೆಡರೇಷನ್ನಿನ ಸಭೆಯು ರಾಜ್ಯದಾದ್ಯಂತ ಹೋರಾಟಕ್ಕೆ ಕರೆನೀಡಿದೆ. ಅಧಿಕ ಸಂಖ್ಯೆಯಲ್ಲಿ ದುಡಿಯುತ್ತಿರುವ ಸ್ತ್ರೀ ಮಜ್ದೂರರ ದಿನದ ಉತ್ಪಾದನೆಯು ರೂ. 4ಕ್ಕಿಂತ ಕಡಿಮೆಯಿದೆ. ಅಧಿಕ ಲಾಭವಿದ್ದರೂ ಬರೇ 8.33% ಬೋನಸನ್ನು ಮಾತ್ರ ಮಾಲಿಕರು ಕೊಡುತ್ತಿದ್ದಾರೆ. ಬೀಡಿಯ ಕ್ರಯವನ್ನು ಹೆಚ್ಚಿಸದೆ ಸಾವಿರ ಬೀಡಿ ಕಟ್ಟಿದ್ದಕ್ಕೆ ಶೇಕಡ ರೂ. 12/– ಮಜೂರಿ ಕೊಡಲು ಸಾಧ್ಯವಿದೆ. ಮಾತ್ರವಲ್ಲ ಶೇಕಡ 20/- ಬೋನಸ್ಸು ಕೊಡಲು ಸಾಧ್ಯವಿದೆ. ಸಭೆಯು ಇದನ್ನೆಲ್ಲಾ ಪರಿಗಣಿಸಿ ಸಾವಿರ ಬೀಡಿ ಕಟ್ಟಿದ್ದಕ್ಕೆ ರೂ. 12/– ಮಜೂರಿ ದೊರೆಯಬೇಕು. ಶೇಕಡ 20 ಬೋನಸ್ಸು ಸಿಗಬೇಕು. ಕಂಟ್ರಾಕ್ಟ ಪದ್ಧತಿ ರದ್ದಾಗಬೇಕು. ಎಂಬ ಕೇಳಿಕೆಗಳನ್ನು ಒತ್ತಾಯಿಸಿಲು ತಾ. 24–3–83 ರಿಂದ 31–3–83ರವರೆಗೆ ಇಡೀ ರಾಜ್ಯದಲ್ಲಿ ಬೇಡಿಕೆ ದಿನಾಚರಣೆಯನ್ನು ಆಚರಿಸಬೇಕು. ಇದರ ಅಂಗವಾಗಿ ಮಂಗಳೂರಿನಲ್ಲಿ ತಾ. 24–3-83 ರಂದು ಬೀಡಿ ಮಜ್ದೂರರ ಪ್ರದರ್ಶನ ನಡೆಸಲು ನಿರ್ಣಯಿಸಲಾಗಿದೆ, ಸರಕಾರ ಈ ಮಧ್ಯ ಪ್ರವೇಶ ಮಾಡಿ ಇತ್ಯರ್ಥ ಮಾಡದಿದ್ದರೆ ತಾ. 25–4–83ರಿಂದ ಇಡೀ ರಾಜ್ಯದ ಬೀಡಿ ಮಾಲೀಕರ ಹಾಗೂ ಸರಕಾರಿ ಕಛೇರಿಗಳ ಮುಂದೆ ಪಿಕೇಟಿಂಗ್ ಮಾಡಲು ನಿರ್ಣಯಿಸಲಾಯಿತು. ರಾಜ್ಯದ ಎಲ್ಲಾ ಬೀಡಿ ಮಜ್ದೂರರು ಈ ಹೋರಾಟಕ್ಕೆ ಸಿದ್ಧರಾಗಬೇಕೆಂದು ಬೀಡಿ ಮಜ್ದೂರರಿಗೆ ಕರೆ ನೀಡಿದೆ.

ಸರಕಾರದ ಭರವಸೆಯಂತೆ 1983 ನೇ ಜನವರಿಯಿಂದ ಮಜ್ದೂರಿ ಪರಿಷ್ಕರಣವಾಗಬೇಕಿತ್ತು. ಆದರೆ ಸರಕಾರ ಮಾಡಲಿಲ್ಲ, ಪರಿಷ್ಕರಿಸಿದ ಹೆಚ್ಚಳವಾದ ಮಜ್ದೂರಿ ಜನವರಿ 1–1–83 ಸಿಗಬೇಕು.

ಪ್ರಕೃತ ಜಾರಿಯಲ್ಲಿರುವ ಕಾನೂನು ಗ್ರಾಮಾಂತರ ಪ್ರದೇಶಗಳಲ್ಲಿ ಜಾರಿ ಮಾಡು ಸರಕಾರ ಪ್ರಯತ್ನ ಮಾಡಬೇಕು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಕೆ. ಮೂಸಬ್ಬರು ವಹಿಸಿದ್ದರು. ರಾಜ್ಯ ಕಾರ್ಯದರ್ಶಿ ಶ್ರೀ ದಸ್ತಗಿರ್‌ರವರು ಮತ್ತು ಯು. ಬಿ. ಲೋಕಯ್ಯನವರು ವರದಿಯನ್ನು ಕೊಟ್ಟರು.

ರಾಣೆಬೆನ್ನೂರು :

ನೇಕಾರರ ಹೋರಾಟಕ್ಕೆ ಗೆಲವು

ಧಾರವಾಡ ಜಿಲ್ಲೆಯ ರಾಣೇಬೆನ್ನೂರು – ತುಮ್ಮಿನಕಟ್ಟೆಗಳು ನೇಕಾರರ ಕೇಂದ್ರಗಳಾಗಿದ್ದು ಸಾವಿರಾರು ನೇಕಾರರು ನೇಕಾರಿಕೆಯ ಮೇಲೆ ಜೀವಿಸುತ್ತಿದ್ದಾರೆ. ಕರ್ನಾಟಕ ಕೈಮಗ್ಗದ ಅಭಿವೃದ್ಧಿ ಕಾರ್ಪೊರೇಷನ್‌ಗಳಲ್ಲೂ ನೇಕಾರರಿಗೆ ಸುಮಾರು ಮಗ್ಗ, ನೂಲು ಕೆಲಸಗಳನ್ನು ಒದಗಿಸಿರುವ ಪ್ರಮುಖ ಸಂಸ್ಥೆಯಾಗಿದೆ. ಇದಲ್ಲದೆ ಇನ್ನೂ ಹಲವು ಸಾವಿರಾರು ನೇಕಾರ ಕಾರ್ಮಿಕರುಗಳು ನೇಕಾರರ ಸಹಕಾರಿ ಸಂಘಗಳಲ್ಲಿ ನೇಕಾರ ಮಾಲೀಕರಲ್ಲಿ ಮತ್ತು ಖಾದಿ ಗ್ರಾಮದ್ಯೋಗ ಕೇಂದ್ರಗಳಲ್ಲಿ ಉದ್ಯೋಗ ಪಡೆದಿರುತ್ತಾರೆ. ಇಷ್ಟಿದ್ದಾಗಿಯೂ ಇನ್ನೂ ನೇಕಾರರು ನಿರುದ್ಯೋಗದ ಬವಣೆ ಪಡುತ್ತಿದ್ದಾರೆ. ಇದರ ದುರುಪಯೋಗ ಪಡೆದುಕೊಂಡು ನೇಕಾರ ಮಾಲೀಕರು ನೇಕಾರ ಕಾರ್ಮಿಕರಿಗೆ ಅತಿ ಕಡಿಮೆ ಕೂಲಿ ನೀಡಿ ಶೋಷಣೆ ನಡೆಸುತ್ತಿದ್ದಾರೆ. ನೇಕಾರ ಕಾರ್ಮಿಕರಿಗೆ ಯಾವುದೇ ಸೌಕರ್ಯ ಉದ್ಯೋಗ ರಕ್ಷಣೆ ಇರುವುದಿಲ್ಲ. ಇತ್ತೀಚಿಗೆ ರಾಣೇಬೆನ್ನೂರು ತುಮ್ಮಿನಕಟ್ಟೆ ನೇಕಾರರು ಸಂಘ ಕಟ್ಟಿ ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಹೋರಾಡುತ್ತಿದ್ದಾರೆ. ಅಲ್ಲಿ ನೇಕಾರರಿಗೆ ಉದ್ಯೋಗ ನೀಡುವಲ್ಲಿ ಇದು ಪ್ರಮುಖ ಸರ್ಕಾರಿ ಸಂಸ್ಥೆಯೇ ಆದ ಕರ್ನಾಟಕ ಕೈಮಗ್ಗ ಅಭಿವೃದ್ಧಿ ಕಾರ್ಪೊರೇಷನಲ್ಲಿ ಕೂಡ ಅತಿ ಕಡಿಮೆ ಕೂಲಿ ನೀಡುತ್ತಿರುವರು. ಯಾವುದೇ ಸೌಕರ್ಯ ನೀಡದಿರುವುದನ್ನು ಪ್ರತಿಭಟಿಸಿ, ಮತ್ತು ಅದೇ ಖಾದಿ ಗ್ರಾಮದ್ಯೋಗ ಸಂಘದಲ್ಲೂ ಬೇಡಿಕೆಗಳು ಮತ್ತು ಇದೇ ರೀತಿ ತೊಂದರೆಗಳನ್ನು ಕೊಡುವುದನ್ನು ಪ್ರತಿಭಟಿಸಿ ದಿನಾಂಕ 14-3-1983 ರಿಂದ ನೇಕಾರ ಕಾರ್ಮಿಕರು ಧರಣಿ ಮತ್ತು ಮುಷ್ಕರ ಮಾಡಲು ಸನ್ನದ್ಧರಾಗಿದ್ದರು. ಸ್ಥಳೀಯ ಯುನಿಟಿನ ಟೆಕ್ನಿಕಲ್ ಆಫೀಸರ್ ವಿನಂತಿ ಮೇರೆಗೆ ಬೆಂಗಳೂರಿನಲ್ಲಿ ಮ್ಯಾನೇಜಿಂಗ್ ಡೈರಕ್ಟರ್ ಮತ್ತು ಕಾರ್ಮಿಕ ಪ್ರತಿನಿಧಿಗಳ ಮಾತುಕತೆಗಳನ್ನು 15–3–1983 ರಂದು ನಿಗದಿಗೊಳಿಸಿ ನಿರ್ದಿಷ್ಟಗೊಳಿಸಿ ಕೆಲವು ಬೇಡಿಕೆಗಳನ್ನು ಮುಂಚಿತವಾಗಿ ಈಡೇರಿಸಿಕೊಡುವ, ಭರವಸೆ ನೀಡಿದ್ದರಿಂದ ಹಾಕಿದ್ದ ಮುಷ್ಕರವನ್ನು ತಾತ್ಕಾಲಿಕವಾಗಿ ಮುಂದೂಡಾಯಿತು. ಸಂಘದ ಅಧ್ಯಕ್ಷರಾದ ಶ್ರೀ ವಿ.ಎನ್. ಹಳಕಟ್ಟಿ ಮತ್ತು ಕಾರ್ಯದರ್ಶಿ ಹೆಚ್. ಎಂ. ಬ್ಯಾಡಗಿ, ಇವರ ನೇತೃತ್ವದಲ್ಲಿ ಹದಿನೈದು ಜನ ನೇಕಾರರ ಕಾರ್ಮಿಕ ನಿಯೋಗ ಬೆಂಗಳೂರಿನಲ್ಲಿ ಕಾರ್ಪೊರೇಷನ್ ಮ್ಯಾನೇಜಿಂಗ್ ಡೈರಕ್ಟರ್ ಇವರನ್ನು ಭೇಟಿಯಾಗಿ ಕಾರ್ಪೊರೇಷನ್ ಕೆಳಗೆ ಬರುವ ನೇಕಾರರ ಸಮಸ್ಯೆಗಳನ್ನು ಅವರೊಂದಿಗೆ ಸುದೀರ್ಘವಾಗಿ ಚರ್ಚಿಸಿ ಒಪ್ಪಂದಕ್ಕೆ ಬರಲಾಯಿತು. ನೇಕಾರ ಕಾರ್ಮಿಕ ನಿಯೋಗದೊಂದಿಗೆ ರಾಣೆಬೆನ್ನೂರು ಶಾಸಕರಾದ ಬಿ. ವಿ. ಪಾಟೀಲರು ಕೂಡಾ ಮಾತುಕತೆಗೆ ಹಾಜರಿದ್ದು, ಸಮಸ್ಯೆ ಬಗೆಹರಿಸಲು ಸಹಕರಿಸಿದರು. ನೇಕಾರ ಕಾರ್ಮಿಕರಿಗೆ ಕೂಲಿಯಲ್ಲಿ ಹೆಚ್ಚಳ, ಸತತ ಮತ್ತು ಒಳ್ಳೆಯ ನೂಲನ್ನು ನೀಡುವುದು ಡಬ್ ಸ್ಕೀಂನಲ್ಲಿ ನೇಕಾರ ಕಾರ್ಮಿಕರಿಗೆ 150 ಮನೆಗಳ ಸೌಲಭ್ಯ, ಉಳಿತಾಯ ನಿಧಿ ಯೋಜನೆ ರಾಣೆಬೆನ್ನೂರು ತುಮ್ಮಿನಕಟ್ಟೆಗಳಲ್ಲಿ ಹೊಸದಾಗಿ ಇನ್ನೂ ಸಾವಿರ ಹೆಚ್ಚಿಗೆ ಮಗ್ಗಗಳಿಗೆ ಸೌಲಭ್ಯ ಮುಂತಾದ ಬೇಡಿಕೆಗಳನ್ನು ಒಪ್ಪಿಕೊಂಡು ಪರಿಹಾರ ನೀಡಿದ್ದಾರೆ. ಎಂಬುದಾಗಿ ಎಸ್. ಎಚ್ ಕ್ಯಾದಗಿ ಅವರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಬೆಂಗಳೂರು

ಎ.ಕೆ.ಜಿ. ದಿನಾಚರಣೆ

ದಿನಾಂಕ 22–3–83ರಂದು ಬೆಂಗಳೂರು ಯಶವಂತಪುರದಲ್ಲಿ, ಎ.ಕೆ.ಜಿ.ಯವರ 6ನೇ ಸ್ಮರಣ ದಿನವನ್ನು ಆಚರಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಡಾ॥ ಪ್ರಕಾಶ್, ಸಿ. ರಾವ್ ವಹಿಸಿದ್ದರು. ಸಭೆಯನ್ನುದ್ದೇಶಿಸಿ ಕಾ. ಎನ್. ಕೆ. ಉಪಾಧ್ಯಾಯ, ಎಸ್. ಸೂರ್ಯನಾರಾಯಣರಾವ್, ಪಿ. ರಾಮಚಂದ್ರರಾವ್ ಅವರುಗಳು ಮಾತನಾಡಿ ಕ್ರಾಂತಿಕಾರಿ ಚಳವಳಿಗೆ ಕಾ. ಎ. ಕೆ. ಜಿ.ಯವರ ಕೊಡುಗೆಯನ್ನು ಸ್ಮರಿಸಿದರು.

ಜನತೆಯ ದಿನನಿತ್ಯದ ಸಮಸ್ಯೆಗಳ ಕುರಿತು ಹೋರಾಟ ಕಣಕ್ಕೆ ಧುಮುಕುತ್ತಿದ್ದ ಕಾ. ಎ.ಕೆ.ಜಿ.ಯವರ ಕುರಿತು ಮಾತನಾಡುತ್ತಿದ್ದ ಭಾಷಣಕಾರರು, ಸೀಮೆಎಣ್ಣೆಯ ಬೆಲೆ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇಳಿಯುತ್ತಿರುವಾಗ ಭಾರತ ಸರ್ಕಾರ ಸೀಮೆಎಣ್ಣೆಯ ಬೆಲೆಯನ್ನು ಏರಿಸಿರುವುದರ ಕುರಿತು ತೀವ್ರ ಟೀಕೆ ಮಾಡಿದರು.

ಉಳ್ಳಾಲ ಗ್ರಾಮ ರೈತ ಸಂಘದಿಂದ ಮನವಿ ಅರ್ಪಣೆ

ತಾ॥ 1–3–83 ರಂದು ಉಳ್ಳಾಲ ಗ್ರಾಮ ರೈತ ಸಂಘದ ಶಿಷ್ಟಮಂಡಳಿಯೊಂದು, ಸಾಮೂಹಿಕ ಸಹಿ ಸಂಗ್ರಹಿಸಿದ ಮನವಿಯೊಂದನ್ನು ಮಂಗಳೂರು ತಾಲೂಕು ಅಭಿವೃದ್ಧಿ ಮಂಡಳಿ ಅಧ್ಯಕ್ಷರಿಗೆ ಅರ್ಪಿಸಿತು.

ಮನವಿಯಲ್ಲಿ, ತೊಕ್ಕೋಟಿನಿಂದ ಮಾರ್ಗ ತಲೆತನಕ ಬಂದಿರುವ ರಸ್ತೆಯನ್ನು ಮುಂದಕ್ಕೆ ಕೊಂಡುಹೋಗಿ ನೇತ್ರಾವತಿನದಿ ತನಕ ಮುಟ್ಟಿಸಬೇಕು, ನೇತ್ರಾವತಿ ನದಿಯಲ್ಲಿ ಬರುವ ನೆರೆಯ ಅನಾಹುತದಿಂದ ನಾಗರಿಕರನ್ನು ರಕ್ಷಿಸಲು ನದಿಬದಿಗೆ ಕಲ್ಲಿನಿಂದ ಉದ್ದಕ್ಕೂ ಕಟ್ಟಡವೊಂದನ್ನು ಕಟ್ಟಬೇಕು.

ಉಳ್ಳಾಲ ಬಳಿಯ–ಹೊಳೆಗೆ ಅಡ್ಡ ಇರುವ ಕಿರುನದಿಗೆ ಈಗಿರುವ ಮರದ ಸೇತುವೆಯನ್ನು ತೆಗೆದು ಕಾಂಕ್ರೀಟಿನ ಸೇತುವೆಯನ್ನು ಹಾಗೆಯೇ ಕೋಟ್ಪಾರು ಉಳಿಯಕ್ಕಿರುವ ಸೇತುವೆಯನ್ನು ಪುನರ್ರಚಿಸಬೇಕು ಎಂಬ ಬೇಡಿಕೆಗಳಿವೆ.

ಮಾರ್ಕ್ಸ್‌ವಾದ : ಶ್ರಮಿಕ ವರ್ಗದ ಪ್ರಬಲ ಅಸ್ತ್ರ

ಆರ್. ಚಂದ್ರ

1983 ಮಾರ್ಚ್, 14ರಂದು ವಿಶ್ವದ ಎಲ್ಲಾ ಶ್ರಮಿಕ ವರ್ಗದ ಶ್ರೇಷ್ಠ ದಾರ್ಶನಿಕ, ಅರ್ಥ ಶಾಸ್ತ್ರಜ್ಞ, ಕ್ರಾಂತಿಕಾರಿ ಹಾಗೂ ಮಾನವತಾವಾದಿ ಕಾರ್ಲ್ ಮಾರ್ಕ್ಸ್‌ರ ಮರಣ ಶತಾಬ್ದಿಯ ದಿನವಾಗಿದೆ. ಮಾರ್ಕ್ಸ್‌ವಾದ ಇಂದಿಗೂ ಜಗತ್ತಿನ ಎಲ್ಲಾ ಶೋಷಿತ ಜನರಿಗೆ ಎಷ್ಟು ಅರ್ಥಪೂರ್ಣವಾಗಿದೆ ಎಂದು ಅರಿತುಕೊಳ್ಳುವುದು ಮತ್ತು ಅವರ ಬೋಧನೆಗಳನ್ನು ಕ್ರಾಂತಿಕಾರಿಯಾಗಿ ಅನುಷ್ಠಾನಗೊಳಿಸುವುದೂ ನಾವು ಅವರಿಗೆ ಅರ್ಪಿಸುವ ಶ್ರದ್ಧಾಂಜಲಿಗಳು.

ಮಾರ್ಕ್ಸ್ ತಮ್ಮ ಆತ್ಮೀಯ ಹಾಗೂ ಆಜೀವ ಸಂಗಾತಿ ಮತ್ತು ಸಹವರ್ತಿ ಎಂಗೆಲ್ಸ್‌ರೊಡಗೂಡಿ, ತಮ್ಮ ಕಾಲದವರೆಗಿನ ಎಲ್ಲ ವಿಜ್ಞಾನಗಳ ತತ್ವಜ್ಞಾನಗಳ ಆಳವಾದ ಅಧ್ಯಯನ ನಡೆಸಿ ಪ್ರಕೃತಿ ಮತ್ತು ಸಮಾಜದ ಹುಟ್ಟು, ಬೆಳವಣಿಗೆ ಹಾಗೂ ಬದಲಾವಣೆಗಳ ನಿಯಮಗಳನ್ನು ತಿಳಿದುಕೊಂಡು, ಅವುಗಳಿಗೆ ಶ್ರಮಿಕ ವರ್ಗದ ವಿಶ್ವಕಣ್ಣೋಟವನ್ನಿತ್ತರು. ಬಂಡವಾಳಶಾಹಿ ಹಿತ ಚಿಂತಕರು, ಮಾರ್ಕ್ಸ್ ಒಬ್ಬ ಮಹಾನ್ ವ್ಯಕ್ತಿ ಎಂದು ಈಗ ಒಪ್ಪಿಕೊಳ್ಳುತ್ತಿದ್ದರೂ, ಮಾರ್ಕ್ಸ್‌ವಾದ ಹಳತಾಗಿದೆ ಎಂದು ತಿರಸ್ಕರಿಸುತ್ತಿದ್ದಾರೆ. ಆದರೆ, ಮಾರ್ಕ್ಸ್ ಮತ್ತು ಎಂಗೆಲ್ಸ್ ಪ್ರತಿಪಾದಿಸಿದ ತತ್ವಗಳು, ಸಿದ್ಧಾಂತಗಳು, ಬೋಧನೆಗಳು ಮುಂದೆ ಅವರ ಸತ್ವಶಾಲಿ ಅನುಯಾಯಿ ಲೆನಿನ್‌ರಿಂದ ಇನ್ನಷ್ಟು ಶ್ರೀಮಂತಗೊಳಿಸಲ್ಪಟ್ಟವು. ಅವುಗಳನ್ನು ವಿಶ್ವದಾದ್ಯಂತ ಶ್ರಮಿಕ ವರ್ಗವು ತನ್ನ ಬಂಧ ವಿಮೋಚನೆಗೆ ಪ್ರಬಲ ಅಸ್ತ್ರವನ್ನಾಗಿ ಬಳಸಿಕೊಳ್ಳುತ್ತಾ ಬಂದಿದೆ. ಪರಿಣಾಮವಾಗಿ, ಮಾರ್ಕ್ಸ್‌ರ ಮರಣಾನಂತರ ಇಂದಿನವರೆಗೆ ಶ್ರಮಿಕ ವರ್ಗದ ಕ್ರಾಂತಿಕಾರಿ ಹೋರಾಟಗಳಿಂದ ಜಗತ್ತಿನ ಮೂರನೇ ಒಂದು ಭಾಗದಲ್ಲಿ ಅಳಿದುಳಿದ ಪಾಳೆಯಗಾರಿ, ಬಂಡವಾಳಶಾಹಿ ಹಾಗೂ ಸಾಮ್ರಾಜ್ಯಶಾಹಿ ವ್ಯವಸ್ಥೆಗಳನ್ನು ನಿರ್ನಾಮಗೊಳಿಸಿ ಶೋಷಣಾರಹಿತ ಸಮಾಜವಾದಿ ವ್ಯವಸ್ಥೆಗಳನ್ನು ಸ್ಥಾಪಿಸಲು ಯಶಸ್ವಿಯಾಗಿದೆ, ಅಲ್ಲದೆ, ವಿಶ್ವದ ಉಳಿದ ಎಲ್ಲಾ ಭಾಗಗಳಲ್ಲಿಯೂ ಹಳೆಯ ಶೋಷಣೆಯ ಸಮಾಜ ವ್ಯವಸ್ಥೆಗಳ ಹಾಗೂ ಸಾಮ್ರಾಜ್ಯಶಾಹಿಗಳ ವಿರುದ್ಧ ಶ್ರಮಿಕ ವರ್ಗವು ತನ್ನ ಹೋರಾಟವನ್ನು ಹರಿತಗೊಳಿಸಲು ಮಾರ್ಕ್ಸ್‌ವಾದ, ಲೆನಿನ್‌ವಾದ ಮತ್ತು ಅದನ್ನಾಧರಿಸಿದ ಜಗತ್ತಿನ ಒಂದು ಭಾಗದ ಸಮಾಜವಾದಿ ವ್ಯವಸ್ಥೆಯು ಅತ್ಯಂತ ಸ್ಫೂರ್ತಿದಾಯಕವಾಗಿದೆ.

ಮಾರ್ಕ್ಸ್‌ವಾದದ ಎರಡು ಮುಖ್ಯ ವಿಭಾಗಗಳು :

ದ್ವಂದ್ವಮಾನ ಭೌತವಾದ (Dialectical Materialism) ಮತ್ತು ಚಾರಿತ್ರಿಕ ಭೌತವಾದ (Historical Materialism) ಇವು ಮಾರ್ಕ್ಸ್‌ವಾದದ ಎರಡು ಮುಖ್ಯ ವಿಭಾಗಗಳು. ದ್ವಂದ್ವಮಾನ ಭೌತವಾದವು ಪ್ರತಿಯೊಂದು ಮಾರ್ಕ್ಸ್‌ವಾದಿ, ಲೆನಿನ್‌ವಾದಿ ಪಕ್ಷದ ಜಾಗತಿಕ ದೃಷ್ಟಿ ಕೋನವಾಗಿದೆ. ಪ್ರಕೃತಿಯ ಎಲ್ಲ ವಿದ್ಯಮಾನಗಳನ್ನು ತಿಳಿಯುವ, ಗ್ರಹಿಸುವ ಪದ್ಧತಿಯು ದ್ವಂದ್ವಮಾನವಾಗಿರುವುದು. ಅಂದರೆ ಚರ್ಚೆ, ತರ್ಕ, ವಿಚಾರ ವಿನಿಮಯ ಅನ್ವೇಷಣೆ. ಪ್ರಯೋಗ, ಪರಿಶೀಲನೆ ಇತ್ಯಾದಿಗಳಿಂದ ವಿದ್ಯಮಾನಗಳಲ್ಲಿರುವ ವೈರುಧ್ಯಗಳನ್ನು ಪ್ರಕಟಗೊಳಿಸುತ್ತಾ ಅಭ್ಯಸಿಸುವುದೇ ದ್ವಂದ್ವಮಾನ ಪದ್ಧತಿ. ಮೊದಲು ಈ ಪದ್ಧತಿಯನ್ನು ಆಧ್ಯಾತ್ಮಿಕ ವಿಷಯಗಳನ್ನು ತಿಳಿಯಲು ಉಪಯೋಗಿಸಲಾಗುತ್ತಿತ್ತು. ಆದರೆ ಮಾರ್ಕ್ಸ್ ಮತ್ತು ಎಂಗೆಲ್ಸ್ ಇದೇ ಪದ್ಧತಿಯನ್ನು ಭೌತಿಕ ವಿದ್ಯಮಾನಗಳನ್ನು ತಿಳಿಯಲು ಅನೇಕಾನೇಕ ನಿಸರ್ಗ ವಿಜ್ಞಾನಿಗಳು ಬಳಸುವುದನ್ನು ಕಂಡುಕೊಂಡರು.

ಭೌತಿಕ ವಿಷಯಗಳನ್ನು, ವಿದ್ಯಮಾನಗಳನ್ನು ತಿಳಿಯಲು ದ್ವಂದ್ವಮಾನ ಪದ್ಧತಿಯನ್ನು ಬಳಸುವಂತೆಯೇ, ಸಾಮಾಜಿಕ ಜೀವನದ ವಿಷಯಗಳನ್ನು, ವಿದ್ಯಮಾನಗಳನ್ನು ತಿಳಿಯಲು ಸಮಾಜ ವಿಜ್ಞಾನಿಗಳಾದ ಮಾರ್ಕ್ಸ್ ಮತ್ತು ಎಂಗೆಲ್ಸ್ ಮೊತ್ತ ಮೊದಲು ಉಪಯೋಗಿಸಿದರು. ಇದುವೇ ಚಾರಿತ್ರಿಕ ಭೌತವಾದ. ಚಾರಿತ್ರಿಕ ಭೌತವಾದದ ಉದ್ದೇಶವು ಸಮಾಜದ ಹುಟ್ಟು, ಬೆಳವಣಿಗೆ, ಬದಲಾವಣೆಗಳ ವಿಜ್ಞಾನಗಳನ್ನು ತಿಳಿದುಕೊಂಡು ಮುಂದಿನ ಬೆಳವಣಿಗೆಗಳಲ್ಲಿ, ಬದಲಾವಣೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದಾಗಿದೆ. ಮಾರ್ಕ್ಸ್‌ವಾದ ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ಅಸ್ತ್ರಗಳಾಗಿ ಶ್ರಮಿಕ ವರ್ಗಕ್ಕೆ ಉಪಯುಕ್ತವಾಗುತ್ತಿದೆ.

ಸಾಮಾಜಿಕ ಬೆಳವಣಿಗೆಯನ್ನು ತಿಳಿಯಲು ದ್ವಂದ್ವಮಾನ ಪದ್ಧತಿಯ ಉಪಯೋಗಗಳು :

1. ಪರಸ್ಪರ ಸಂಬಂಧ, ಅವಲಂಬನೆ : ಸಮಾಜ ವ್ಯವಸ್ಥೆಯು ಅದರ ರೀತಿ ನೀತಿಗಳು ಸ್ಥಿರವಾಗಿರದೆ ಬದಲಾಗುತ್ತಲೇ ಇರುವುವು. ಅಲ್ಲಿನ ವಿದ್ಯಮಾನಗಳು ಪರಸ್ಪರ ಸಂಬಂಧ ಉಳ್ಳವುಗಳಾಗಿರುವುವು. ಒಂದರ ಮೇಲೊಂದು ಅವಲಂಬಿಸಿರುವುವು. ಸಮಾಜದಲ್ಲಿ ಅಂತರ್ಗತವಾದ ವೈರುಧ್ಯಗಳೊಳಗಿನ ಹೋರಾಟಗಳಿಂದ - ಅಸ್ತಿವಂತರ ಮತ್ತು ಶ್ರಮಿಕ ವರ್ಗಗಳೊಳಗಿನ ಹೋರಾಟಗಳಿಂದ ಬೆಳವಣಿಗೆ, ಬದಲಾವಣೆಗಳು ಸಾಧ್ಯವಾಗುವುವು. ಪ್ರಾಚೀನ ದಾಸ್ಯ ಪದ್ಧತಿಯು ಸಮಕಾಲೀನ ಪರಿಸ್ಥಿತಿಯಲ್ಲಿ ಅಸಮಂಜಸವಾಗುವುದು. ಆದರೆ, ಪ್ರಾಚೀನ ಸಮುದಾಯ ಪದ್ಧತಿಗಿಂತ ಇದು ಮುಂದುವರಿದುದಾಗಿತ್ತು. ಹಾಗೆಯೇ ಈ ಶತಮಾನದ ಮೊದಲಲ್ಲಿ ಬಂಡವಾಳಶಾಹಿ ಮಾದರಿಯ ಪ್ರಜಾಪ್ರಭುತ್ವದ ಗಣರಾಜ್ಯವು ರಷ್ಯಾ ದೇಶಕ್ಕೆ ಯೋಗ್ಯವೆಂದು ಕಂಡರೂ, ಅಲ್ಲಿಯ ಸಮಾಜದ ವೈರುಧ್ಯಗಳೊಳಗಿನ ಹೋರಾಟದ ಫಲವಾಗಿ, ಎರಡೇ ದಶಕಗಳೊಳಗೆ ಶ್ರಮಿಕ ವರ್ಗ ಸರ್ವಾಧಿಕಾರವುಳ್ಳ ಪ್ರಭುತ್ವವನ್ನು ಸ್ಥಾಪಿಸಲು ಸಾಧ್ಯವಾಯಿತು. ಅರಸೊತ್ತಿಗೆ, ನಿರಂಕುಶ ಪ್ರಭುತ್ವ ಇವುಗಳಿಗಿಂತ ಭಾರತದಲ್ಲಿದ್ದಂತೆ ಬಂಡವಾಳಶಾಹಿ ಪ್ರಜಾಪ್ರಭುತ್ವ ಉತ್ತಮವಾದುದು. ಆದರೆ, ಸಮಾಜವಾದಿ ಗಣರಾಜ್ಯ ಪದ್ಧತಿಯು ಇನ್ನೂ ಉತ್ತಮವಾದುದೆಂದು ಇಂದು ಜಗತ್ತಿನ ಎಲ್ಲ ಶ್ರಮಿಕ ವರ್ಗಕ್ಕೆ ಮನವರಿಕೆಯಾಗುತ್ತಿದೆ. ಸಾಮಾಜಿಕ ವ್ಯವಸ್ಥೆಯ ಯೋಗ್ಯಾಯೋಗ್ಯತೆಗಳು ಕಾಲ, ಸ್ಥಳ ಮತ್ತಿತರ ಪರಿಸ್ಥಿತಿಗಳನ್ನು ಹೊಂದಿಕೊಂಡಿವೆ.

2. ನಿರಂತರ ಬದಲಾವಣೆ : ಮೇಲಿನ ಉದಾಹರಣೆಯಿಂದ ಸಾಮಾಜಿಕ ವ್ಯವಸ್ಥೆಯಲ್ಲಿ ನಿರಂತರ ಬದಲಾವಣೆಗಳಾಗುತ್ತಿರಲೇಬೇಕು. ಸದ್ಯದ ಬಂಡವಾಳಶಾಹಿ ಪದ್ಧತಿ

ಮಾರ್ಕ್ಸ್ ಮರಣ ಶತಾಬ್ಧಿ ಲೇಖನ ಮಾಲೆ

ಲೇಖನ — 5

ಯನ್ನು ಬದಲಾಯಿಸಿ ಸಮಾಜವಾದಿ ಪದ್ಧತಿಯನ್ನು ಸ್ಥಾಪಿಸಲು ಸಾಧ್ಯತೆ ಇದೆ. ಬಂಡವಾಳಶಾಹಿ ಶಕ್ತಿಗಳು ಸದ್ಯದಲ್ಲಿ ಪ್ರಬಲವಾಗಿದ್ದರೂ, ಬೆಳೆಯುತ್ತಿದ್ದರೂ ಅವುಗಳಲ್ಲಿರುವ ವೈರುಧ್ಯಗಳಿಂದಾಗಿ ಕಾಲಕ್ರಮೇಣ ಆ ಪದ್ಧತಿಯು ಅವಸಾನ ಹೊಂದುವುದು. ಆದಕ್ಕೆ ಸಮಾನಾಂತರವಾಗಿ ಶ್ರಮಿಕ ವರ್ಗದ ಶಕ್ತಿಗಳು ಸದ್ಯ ಕ್ಷೀಣವಾಗಿದ್ದರೂ ಮುಂದೆ ಪ್ರಬಲವಾಗಿ ಪ್ರಭುತ್ವಕ್ಕೆ ಬರುವ ಸಾಧ್ಯತೆಗಳಿವೆ. ಉದಾ : ರಷ್ಯಾ, ಚೀನಾ, ಪೂರ್ವ ಯೂರೋಪ್, ಕ್ಯೂಬಾ, ವಿಯಟ್ನಾಂ ದೇಶಗಳ ಕ್ರಾಂತಿ ಮತ್ತು ಇತರ ದೇಶಗಳಲ್ಲಿನ ಸಾಮಾಜಿಕ ಕ್ರಾಂತಿಗೆ ನಡೆಯುವ ಸನ್ನಾಹಗಳು.

3. ತ್ವರಿತಗತಿಯ ಬದಲಾವಣೆ, ನೆಗೆತ (Leap) ಗಾತ್ರದಲ್ಲಿ ಬದಲಾವಣೆಯಾಗುತ್ತಾ, ಒಮ್ಮಿಂದೊಮ್ಮೆಲೇ ತ್ವರಿತವಾಗಿ ಗುಣದಲ್ಲಿ ಬದಲಾವಣೆಯಾಗುವುದು ಬೆಳವಣಿಗೆಯ ತತ್ವವಾಗಿದ್ದರೆ, ತುಳಿತಕ್ಕೊಳಗಾದ ವರ್ಗಗಳು ಸಾಮಾಜಿಕ ಕ್ರಾಂತಿಯನ್ನು ಯಶಸ್ವಿಗೊಳಿಸುವುದು ಸಹಜವಾದ ನೈಸರ್ಗಿಕ ಮತ್ತು ಅನಿವಾರ್ಯದ ವಿದ್ಯಮಾನವಾಗಿದೆ. ಅಂತೆಯೇ ಬಂಡವಾಳಶಾಹಿ ಪದ್ಧತಿಯಿಂದ ಸಮಾಜವಾದಿ ಪದ್ಧತಿಗೆ ಪರಿವರ್ತನೆಗೊಳ್ಳುವುದು. ಶ್ರಮಿಕ ವರ್ಗವನ್ನು ಬಂಡವಾಳಶಾಹಿ ನೊಗಭಾರದಿಂದ ಬಿಡುಗಡೆ ಮಾಡುವುದು ಸಾವಧಾನವಾದ ಸುಧಾರಣಾ ಕಾರ್ಯಕ್ರಮಗಳಿಂದ ಅಸಾಧ್ಯ. ಅಂತಹ ಬದಲಾವಣೆ ಕ್ರಾಂತಿಕಾರಕ ಮಾರ್ಗದಿಂದಲೇ ಸಾಧ್ಯ. ಆದುದರಿಂದ, ಸಾಮಾಜಿಕ ಬದಲಾವಣೆಯಲ್ಲಿ ಆಸಕ್ತರಾದವರೆಲ್ಲರೂ ಸುಧಾರಣಾವಾದಿಗಳಾಗದೆ ಕ್ರಾಂತಿಕಾರರಾಗಿರಬೇಕು. ಬೆಳವಣಿಗೆಯು ಅಂತರ್ಗತವಾಗಿರುವಾಗ ವೈರುಧ್ಯಗಳೊಳಗಿನ ಹೋರಾಟವೆಂದಾದರೆ, ಸಾಮಾಜಿಕ ಬದಲಾವಣೆಯು ಬಂಡವಾಳಶಾಹಿ ವೈರುಧ್ಯಗಳೊಳಗಿನ ಘರ್ಷಣೆಯನ್ನು ಹರಿತಗೊಳಿಸಬೇಕೇ ಹೊರತು ತೇಪೆ ಹಚ್ಚುವುದಲ್ಲ, ಅರ್ಥಾತ್ ವರ್ಗ ಹೋರಾಟವನ್ನು ಹರಿತಗೊಳಿಸಬೇಕು.

ಮಾರ್ಕ್ಸ್‌ರ ಭೌತವಾದದಿಂದ ಸಾಮಾಜಿಕ ಬದಲಾವಣೆ ಹಾಗೂ ಪ್ರಗತಿಗೆ ಪ್ರಯೋಜನಗಳು :

1. ಸಮಾಜದ ಚರಿತ್ರೆ–ವಿಜ್ಞಾನ : ಸಾಮಾಜಿಕ ಜೀವನ ಮತ್ತು ಸಾಮಾಜಿಕ ಚರಿತ್ರೆ ಒಂದು ಆಕಸ್ಮಿಕ ಘಟನೆಗಳ ಸಮೂಹವಲ್ಲ ಅದರ ಬೆಳವಣಿಗೆಯು ನಿರ್ದಿಷ್ಟವಾದ ನಿಯಮಗಳಿಗೆ ಒಳಗಾಗಿದೆ. ಹೀಗಾಗಿ ಸಮಾಜದ ಚರಿತ್ರೆಯ ಅಭ್ಯಾಸವು ಒಂದು ವಿಜ್ಞಾನವೇ ಆಗಿದೆ. ಆದುದರಿಂದ ಶ್ರಮಿಕ ವರ್ಗದ ಪಕ್ಷ ಕಾರ್ಯಕ್ರಮಗಳು ಅತ್ಯಂತ ಮೇಧಾವಿಗಳ ಶುಭಾಶಯಗಳಿಂದಾಗಲೀ, ವಿಶ್ವನೀತಿಗಳಿಂದಾಗಲೀ, ಕೇವಲ ನ್ಯಾಯಾನ್ಯಾಯಗಳ ನಿಷ್ಕರ್ಷೆಯಿಂದಾಗಲೀ ಪ್ರಭಾವಿತವಾಗಿರುವುದಿಲ್ಲ. ಅದರ ಬದಲು, ಸಮಾಜದ ಬೆಳವಣಿಗೆಯ ನಿಯಮಗಳಿಂದಲೂ ಮತ್ತು ಅವುಗಳ ಅಧ್ಯಯನ ಹಾಗೂ ಪ್ರಯೋಗಗಳಿಂದಲೂ ಪ್ರಭಾವಿತವಾಗಿರುವುದು.

ಪ್ರಪಂಚವು ವಾಸ್ತವಿಕ ಸತ್ಯವಾದುದರಿಂದ ಪ್ರಪಂಚವನ್ನು ತಿಳಿಯಬಹುದಾಗಿದೆ. ಅದರ ಬೆಳವಣಿಗೆಯ ಕುರಿತಾದ ನಮ್ಮ ಜ್ಞಾನವು ನಂಬಲರ್ಹವಾಗಿದೆ. ಸಮಾಜವೂ ವಾಸ್ತವಿಕ ಸತ್ಯವಾಗಿರುವುದರಿಂದ, ಸಾಮಾಜಿಕ ಜೀವನವನ್ನು, ಸಾಮಾಜಿಕ ಬೆಳವಣಿಗೆಯನ್ನು ನಾವು ತಿಳಿದುಕೊಳ್ಳಬಹುದಾಗಿದೆ. ಅದರ ನಿಯಮಗಳ ಕುರಿತಾದ ವಿಜ್ಞಾನಗಳಿಗೆ ಸಂಬಂಧಿಸಿದ ವಿಷಯಗಳು ನಂಬಲರ್ಹವಾಗಿವೆ. ಆದುದರಿಂದ, ಸಮಾಜದ ಚರಿತ್ರೆಯಲ್ಲಿ ಸಮಾಜದ ಜೀವನದ ವಿದ್ಯಮಾನಗಳಲ್ಲಿ ಹಲವಾರು ಕ್ಲಿಷ್ಟತೆಗಳಿದ್ದರೂ ಒಂದು ನಿಖರವಾದ ವಿಜ್ಞಾನವಾಗುವುದು. ಸಮಾಜ ವಿಜ್ಞಾನವು ಜೀವಶಾಸ್ತ್ರ, ಖಗೋಳಶಾಸ್ತ್ರ, ಮುಂತಾದ ನೈಸರ್ಗಿಕ ವಿಜ್ಞಾನಗಳಷ್ಟೇ ಸ್ಪಷ್ಟವೂ ಸತ್ಯವೂ ಆಗಿರುವುದು.

ಹೀಗಾಗಿ, ಶ್ರಮಿಕ ವರ್ಗದ ಪಕ್ಷವು ಊಹಾಪೋಹಗಳನ್ನು ಆಧರಿಸದೆ, ಸಮಾಜ ವಿಜ್ಞಾನವನ್ನು ಅವಲಂಬಿಸಿರುವುದು. ಆದುದರಿಂದ ಸಮಾಜವಾದವು ಕೇವಲ ಕನಸಾಗಿರದೆ ಮಾನವ ಭವಿಷ್ಯವನ್ನು ನಿರ್ಣಯಿಸುವ ವಿಜ್ಞಾನವಾಗಿದೆ. ವಿಜ್ಞಾನದಲ್ಲಿ ಸಿದ್ಧಾಂತಕ್ಕೂ ಆಚರಣೆಗೂ ನಿಕಟ ಸಂಬಂಧವಿರುವಂತೆ ಸಾಮಾಜಿಕ ಬದಲಾವಣೆಯ ಕಾರ್ಯದಲ್ಲಿಯೂ ಸಿದ್ಧಾಂತಕ್ಕೂ ಆಚರಣೆಗೂ ನಿಕಟ ಸಂಬಂಧವಿದೆ.

2. ಅಸ್ತಿತ್ವ ಮೊದಲು, ಪ್ರಜ್ಞೆ ನಂತರ : ಪ್ರಪಂಚದ ಅಸ್ತಿತ್ವ ಮೊದಲು, ಅದರ ಕುರಿತಾದ ಪ್ರಜ್ಞೆಯು ನಂತರ. ಪ್ರಜ್ಞೆಯು ವಸ್ತುವಿನ ಪ್ರತಿಬಿಂಬ ಎಂದಾದರೆ ಸಾಮಾಜಿಕ ಜೀವನದಲ್ಲಿಯೂ ಭೌತಿಕ ಜೀವನ ಮೊದಲು ಮತ್ತು ಆಧ್ಯಾತ್ಮಿಕ ಜೀವನವು ನಂತರ. ಸಾಮಾಜಿಕ ವಿಚಾರಗಳು, ಸಿದ್ಧಾಂತಗಳು, ರಾಜಕೀಯ ಅಭಿಪ್ರಾಯಗಳು ಹಾಗೂ ರಾಜಕೀಯ ಸಂಸ್ಥೆಗಳು ಇವೆಲ್ಲಾ ಆಯಾಯ ಸಮಾಜದ ಭೌತಿಕ ಜೀವನ ವ್ಯವಸ್ಥೆಯನ್ನು ಪ್ರತಿನಿಧಿಸುವುದು. ಆದುದರಿಂದ ವಿಚಾರಗಳು ಸಿದ್ಧಾಂತಗಳು, ರಾಜಕೀಯ ಸಂಸ್ಥೆಗಳು, ರೀತಿನೀತಿಗಳು ಸಮಾಜದ ಭೌತಿಕ ಜೀವನ ವ್ಯವಸ್ಥೆಯು ಬದಲಾದಂತೆ ಬದಲಾಗುತ್ತಲೇ ಇರುವುವು, ಮಾರ್ಕ್ಸ್ ಹೇಳುವಂತೆ, ಮಾನವರ ಪ್ರಜ್ಞೆಯು ಅವರ ಇರುವಿಕೆಯನ್ನು ನಿರ್ಧರಿಸುವುದಿಲ್ಲ. ಅದರ ಬದಲು, ಅವರ ಸಾಮಾಜಿಕ ಪರಿಸರವು ಅವರ ಪ್ರಜ್ಞೆಯನ್ನು ನಿರ್ಧರಿಸುವುದು.

3. ಹೊಸ ಪ್ರಜ್ಞೆ, ಹೊಸ ಪರಿಸರ : ಹೊಸ ವಿಚಾರ, ಪ್ರಜ್ಞೆ, ಸಿದ್ಧಾಂತ, ರಾಜಕೀಯ ವ್ಯವಸ್ಥೆ, ಹೊಸ ಸಾಮಾಜಿಕ ಜೀವನದ, ಪರಿಸರಕ್ಕನುಗುಣವಾಗಿ ರೂಪುಗೊಳ್ಳುವುವು. ಬಂಡವಾಳಶಾಹಿ ಸಮಾಜದ ಪರಿಸರದಲ್ಲಿ ಶ್ರಮಿಕ ವರ್ಗವು ಶೋಷಣೆಯ ವಿರುದ್ಧ ಹೋರಾಟ ಮಾಡುತ್ತಿರುವಾಗ ಸಮಾಜದ ವೈರುಧ್ಯಗಳ ಕುರಿತು ತಿಳುವಳಿಕೆ ಪಡೆಯುವರು, ಸಮಾನತೆ, ಸಮಾನ ಅವಕಾಶಗಳ ಅಗತ್ಯವನ್ನು ಕಂಡುಕೊಳ್ಳುವರು. ಶೋಷಣೆಯು ಅಂತಿಮವಾಗಿ ನಿರ್ನಾಮವಾಗಬೇಕಾದರೆ ಸಮಾಜದ ಆರ್ಥಿಕ ಸಂಬಂಧದಲ್ಲಿ ಬದಲಾವಣೆಯಾಗಬೇಕೆಂದು ಕಂಡುಕೊಳ್ಳುವರು. ಅಂತಹ ಬದಲಾವಣೆಯು ಶ್ರಮಿಕ ವರ್ಗವೇ ರಾಜಕೀಯ ಅಧಿಕಾರವನ್ನು ಸ್ವಾಧೀನಪಡಿಸಿಕೊಂಡಾಗ ಮಾತ್ರ ಸಾಧ್ಯ ಎಂದು ತಿಳಿಯುವರು. ಆ ನಿಟ್ಟಿನಲ್ಲಿ ಅವರ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಹೋರಾಟಗಳು ಮುಂದುವರಿಯುವುವು. ಬಂಡವಾಳಶಾಹಿ ಸಮಾಜ ಪದ್ಧತಿಯ ಬೆಳವಣಿಗೆ, ಅದರಲ್ಲಿರುವ ವೈರುಧ್ಯ, ಅದರ ಅವಸಾನದ ಅವಕಾಶಗಳು, ಸಮಾಜವಾದಿ ಪದ್ಧತಿಯನ್ನು ಪಡೆಯಲು ಬೇಕಾದ ಸಿದ್ಧತೆಗಳು, ಕಾರ್ಯಕ್ರಮಗಳು ಇತ್ಯಾದಿ ಹೊಸ ಪ್ರಜ್ಞೆಯನ್ನು ಶ್ರಮಿಕ ವರ್ಗವು ಪಡೆಯುವುದು.

(5ನೇ ಪುಟ ನೋಡಿ)

ಕಾರ್ಲ್‌ಮಾರ್ಕ್ಸ್‌ರಿಗೆ ಪಿ. ಎಚ್. ಡಿ.

ಪೂರ್ವ ಜರ್ಮನಿಯ ಜೆನಾದ ಫ್ರೀಡರಿಕ್ ಸಿಲ್ಲರ್ ವಿಶ್ವವಿದ್ಯಾಲಯವು 1841ರಲ್ಲಿ ಕಾರ್ಲ್ ಮಾರ್ಕ್ಸ್‌ರಿಗೆ ಡಾಕ್ಟರೇಟ್ (Phd) ಪದವಿಯನ್ನು ನೀಡಿತ್ತು. ಇತ್ತೀಚೆಗೆ ಈ ವಿಶ್ವವಿದ್ಯಾಲಯವು ಈ ವಿಷಯವನ್ನು ಪತ್ತೆ ಮಾಡಿದೆ ಮತ್ತು ಇದೇ ವರ್ಷ ಈ ವಿಶ್ವವಿದ್ಯಾನಿಲಯದ 425ನೇ ವಾರ್ಷಿಕೋತ್ಸವದಲ್ಲಿ ಸಾಂಕೇತಿಕವಾಗಿ ಮತ್ತೊಮ್ಮೆ ಕಾರ್ಲ್‌ಮಾರ್ಕ್ಸ್‌ರಿಗೆ ಡಾಕ್ಟರೇಟ್ ಪದವಿ ನೀಡಲಿದೆ.

ಸವದತ್ತಿಯಲ್ಲಿ ಕಾರ್ಲ್‌ಮಾರ್ಕ್ಸ್ ಮರಣ ಶತಾಬ್ಧಿ ಸಮಾರಂಭ

ರವಿವಾರ ದಿನಾಂಕ 14-3-1983 ರಂದು ಸವದತ್ತಿಯಲ್ಲಿ ವೈಜ್ಞಾನಿಕ ಸಮಾಜವಾದದ ಜನಕ ಕಾರ್ಲ್ ಮಾರ್ಕ್ಸ್ ಇವರ ಮರಣ ಶತಾಬ್ದಿ ಸಮಾರಂಭವನ್ನು ಆಚರಿಸಲಾಯಿತು. ಹುಬ್ಬಳ್ಳಿಯ ಜೆ. ಎಸ್. ಎಸ್. ಕಾನೂನು ಮಹಾವಿದ್ಯಾಲಯದ ಪ್ರೊ. ಕೆ. ಎಸ್. ಶರ್ಮಾ, ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಕರ್ನಾಟಕ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದ ಡಾ॥ ರಾಘವೇಂದ್ರರಾವ್ ಇವರು ಅಧ್ಯಕ್ಷತೆ ವಹಿಸಿದ್ದರು. ಪ್ರೊಫೆಸರ್ ಶರ್ಮಾ ಮಾತನಾಡುತ್ತಾ ನಮ್ಮ ದೇಶದ ದುಡಿಯುವ ಜನತೆಯ ವಿಮೋಚನೆಗೆ ಕಾರ್ಲ್ ಮಾರ್ಕ್ಸ್ ತೋರಿಸಿಕೊಟ್ಟಿರುವ ವರ್ಗಹೋರಾಟ ಒಂದೇ ದಾರಿ ಎಂದು ಅಭಿಪ್ರಾಯಪಟ್ಟರು, ಅಧ್ಯಕ್ಷತೆ ವಹಿಸಿದ್ಧ ಡಾ॥ ರಾವ್ ಮಾತನಾಡುತ್ತಾ ಭಾರತದಲ್ಲಿ ವರ್ಗ ನಾಶದ ಹೋರಾಟವು ಜಾತಿ ನಾಶದ ಹೋರಾಟವನ್ನು ಸಹ ಒಳಗೊಂಡಿದೆ ಎಂದು ಹೇಳಿದರು. ಕರ್ನಾಟಕ ವಿಶ್ವವಿದ್ಯಾಲಯದ ಡಾ॥ ವಿ. ಎನ್. ದೇಶಪಾಂಡೆ ಇವರು ಅತಿಥಿಗಳಾಗಿ ಆಗಮಿಸಿದ್ದರು.

ಆರಂಭದಲ್ಲಿ ಶತಾಬ್ದಿ ಸಮಾರಂಭ ಸಮಿತಿಯ ಸಂಚಾಲಕರಾಗಿದ್ದ ಕಾ. ನಿತ್ಯಾನಂದಜಿಯವರು ಸ್ವಾಗತಿಸಿದರು. ಸ್ಥಳೀಯ ಸಾಹಿತಿಗಳಾದ ಶ್ರೀ ಈಶ್ವರ ತಾಪಸೆಯವರು ಕಾರ್ಲ್‌ಮಾರ್ಕ್ಸ್ ಬಗ್ಗೆ ತಾವು ಬರೆದ ಕವನವನ್ನು ಓದಿದರು. ಕಾರ್ಯಕ್ರಮದ ಅಂಗವಾಗಿ ಧಾರವಾಡದ ಡಿ.ವೈ.ಎಫ್.ಐ. ಸಂಗಾತಿಗಳಾದ ಕಾಮ್ರೆಡ್ ಕೃಷ್ಣಶೆಟ್ಟಿ ಮತ್ತು ಕಾಮ್ರೆಡ್ ಜಿ. ಸಿ. ವೈ. ಮಠ ಇವರು ಕಾರ್ಲ್‌ಮಾರ್ಕ್ಸ್ ಸಾಹಿತ್ಯ ಪ್ರದರ್ಶನವನ್ನು ಏರ್ಪಡಿಸಿದ್ದರು.

ಕುಂದಾಪುರ :

"ಕಾರ್ಲ್‌ಮಾರ್ಕ್ಸ್ ಜೀವನ ಮತ್ತು ತತ್ವ" ಕುರಿತು ಉಪನ್ಯಾಸ ಕಾರ್ಯಕ್ರಮ

ತಾರೀಖು 15-3-1983ರಂದು ಕಾರ್ಲ್ ಮಾರ್ಕ್ಸ್ ಮರಣ ಶತಾಬ್ಧಿ ಸ್ಮರಣಾರ್ಥ ಕುಂದಾಪುರದ ಕೋಯಾ ಕುಟ್ಟಿ ಹಾಲ್‌ನಲ್ಲಿ ಡಿ.ವೈ.ಎಫ್.ಐ. ತಾಲ್ಲೂಕು ಸಮಿತಿ ಮತ್ತು ಎಸ್. ಎಫ್. ಐ. ಟೌನ್ ಸಮಿತಿಗಳ ಆಶ್ರಯದಲ್ಲಿ 'ಕಾರ್ಲ್ ಮಾರ್ಕ್ಸ್ -ಜೀವನ ಮತ್ತು ತತ್ವ' ವಿಚಾರವಾಗಿ ಉಪನ್ಯಾಸ ಕಾರ್ಯಕ್ರಮ ನಡೆಸಲಾಯಿತು. ಉಪನ್ಯಾಸಕರಾಗಿ ಮಣಿಪಾಲ ಕೆ. ಎಂ. ಸಿ. ಯ ಡಾ॥ ಪಿ. ಕೆ. ಆರ್. ವಾರಿಯರ್ ಆಗಮಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಬಿ. ಮಾಧವ ವಹಿಸಿದ್ದರು.

ಕಾರ್ಲ್ ಮಾರ್ಕ್ಸ್‌ರು ನಿರೂಪಿಸಿದ ವೈಜ್ಞಾನಿಕ ಕಮ್ಯುನಿಸಂ ತತ್ವವು ಯಾವುದೇ ದೇಶಕ್ಕೆ ಸೀಮಿತವಾಗಿರದೆ, ಇದೊಂದು ಜಾಗತಿಕ ಮಹತ್ವವುಳ್ಳ ತತ್ವವಾಗಿದೆಯೆಂದು ಡಾ॥ ವಾರಿಯರ್ ವಿವರಿಸಿದರು. ಮಾರ್ಕ್ಸ್‌ವಾದವು ಒಂದು ಕ್ರಾಂತಿಕಾರಿ ತತ್ವ. ಈ ತತ್ವವು ಮಾರ್ಕ್ಸ್‌ನ ಕಲ್ಪನಾ ಶಕ್ತಿಯಿಂದ ರಚಿತವಾಗಿಲ್ಲ; ಸುಮಾರು 2500 ವರ್ಷಗಳ ತತ್ವಶಾಸ್ತ್ರ ಹಾಗೂ ಸಾಮಾಜಿಕ ಇತಿಹಾಸದ ಸತತ ಅಭ್ಯಾಸದಿಂದ ವಾಸ್ತವ ಸಂಗತಿಗಳನ್ನು ಆಧರಿಸಿ ಈ ತತ್ವವು ನಿರೂಪಿತವಾಗಿದೆ. ಇತಿಹಾಸದ ಮೂರನೇ ಘಟ್ಟವಾದ ಬಂಡವಾಳಶಾಹಿಯಲ್ಲಿ ಶೋಷಣೆಗೊಳಗಾದ ಜನಸಮೂಹದಲ್ಲಿ ಕಾರ್ಮಿಕ ವರ್ಗವು ಅತ್ಯಂತ ಪ್ರಜ್ಞಾವಂತ ಹಾಗೂ ಕ್ರಾಂತಿಕಾರಿ ವರ್ಗವಾಗಿದ್ದು, ಇದರ ನೇತೃತ್ವದಲ್ಲಿ ವರ್ಗ ಹೋರಾಟ ನಡೆದು ಜನತೆಯ ದುಡಿಯುವ ಜನತೆಯ ಪ್ರಭುತ್ವ ಸ್ಥಾಪನೆಯಾಗುತ್ತದೆ ಎನ್ನುವ ವಾಸ್ತವ ಸತ್ಯವನ್ನು ಆಧರಿಸಿ ಮಾರ್ಕ್ಸ್ ನಿರೂಪಿಸಿದ ಸಿದ್ಧಾಂತವು ಕೇವಲ ಒಂದು ಸಿದ್ಧಾಂತವಾಗಿರದೆ ಇದು ಪ್ರಯೋಗಾತ್ಮಕವಾಗಿದೆ; ಆದ್ದರಿಂದ ಇದು 'ವೈಜ್ಞಾನಿಕ' ಎಂದು ವಾರಿಯರ್ ವಿವರಿಸಿದರು. ಕಮ್ಯುನಿಸ್ಟ ತತ್ವ ಸರಿ, ಆದರೆ ಇದು ಭಾರತಕ್ಕೆ ಒಗ್ಗುವುದಿಲ್ಲವೆಂದು ಹೇಳಲಾಗುತ್ತಿರುವ ವಿಷಯವನ್ನು ಪ್ರಸ್ತಾಪಿಸಿ ವಿಶ್ವದ ಜನಸಂಖ್ಯೆಯ ಮೂರನೇ ಒಂದು ಭಾಗ ಮಾರ್ಕ್ಸ್‌ವಾದಿ ಸಿದ್ಧಾಂತದ ನೆಲೆಯಲ್ಲಿ ವಿಮೋಚಿತರಾಗಿರುವಾಗ, ಭಾರತದಲ್ಲೂ ಇದು ಏಕೆ ಸಂಗತವಾಗುವುದಿಲ್ಲ ಎಂದು ಕೇಳಿ ಇಂಥ ವಿಚಾರಗಳು ಪಟ್ಟಭದ್ರ ಹಿತಾಸಕ್ತರು ನಡೆಸುವ ಗೊಂದಲದ ಅಪಪ್ರಚಾರವೆಂದು ಹೇಳಿದರು. ಅಲ್ಲದೆ ನಮ್ಮ ದೇಶದಲ್ಲಿ ತಾಂಡವವಾಡುತ್ತಿರುವ ಸಮಸ್ಯೆಗಳಿಗೆ ದುಡಿಯುವ ವರ್ಗದ ಪ್ರಭುತ್ವವೇ ಪರಿಹಾರವೆಂದರು. ಯಾವಾಗಲೂ ಗರೀಬಿ ಹಟಾವೋ, ನಿರುದ್ಯೋಗ ನಿವಾರಣೆ ಇತ್ಯಾದಿ 'ಸಮಾಜವಾದಿ' ಘೋಷಣೆಗಳನ್ನು ನೀಡಿ ಜನತೆಯನ್ನು ವಂಚಿಸುತ್ತಲೇ ಬಂದಿರುವ ಕಾಂಗ್ರೆಸ್ ಸರಕಾರವು ಕಮ್ಯುನಿಸ್ಟ ವಿರೋಧಿ ಧೋರಣೆಯುಳ್ಳದ್ದಾಗಿದೆಯೆಂದರು. ಕಮ್ಯುನಿಸ್ಟ ಸಿದ್ಧಾಂತ ರೂಪುಗೊಳ್ಳುವಲ್ಲಿ ಮಹತ್ತರ ಪಾತ್ರವಹಿಸಿದ್ದ ಫ್ರೆಡ್ರಿಕ್ ಎಂಗೆಲ್ಸ್‌ರು ಮಾರ್ಕ್ಸ್ ಹಾಗೂ ಆವರ ಕುಟುಂಬಕ್ಕೆ ಸಲ್ಲಿಸಿದ ಅಗಾಧ ಸಹಾಯವನ್ನು ತಿಳಿಸಿ, ಮಾರ್ಕ್ಸ್ - ಎಂಗೆಲ್ಸ್ ಗೆಳೆತನ ಐತಿಹಾಸಿಕವಾದದ್ದೆಂದರು. ಕೊನೆಯದಾಗಿ ಎಸ್. ಎಫ್. ಐ. ಮತ್ತು ಡಿ. ವೈ. ಎಫ್. ಐ. ಸಂಘಟನೆಗಳು ಸಾಮಾನ್ಯವಾಗಿ ಮಧ್ಯಮ ವರ್ಗಕ್ಕೆ ಸೇರಿದವಾಗಿದ್ದು, ವೈಜ್ಞಾನಿಕ ಸಮಾಜವಾದದ ಬಗ್ಗೆ ಹೆಚ್ಚೆಚ್ಚು ಅಭ್ಯಾಸ ಮಾಡಿ ಇತರರಿಗೆ ತಿಳಿಸುವ ಕೆಲಸ ಮಾಡಬೇಕೆಂದು ಡಾ॥ ವಾರಿಯರ್ ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ ಬಿ. ಮಾಧವರು ಮಾತನಾಡುತ್ತಾ ಕಮ್ಯುನಿಸಂ ತತ್ವವು ಮಾರ್ಕ್ಸ್‌ರವರು ಮನುಷ್ಯ ಕುಲಕ್ಕೆ ನೀಡಿದ ಬೃಹತ್ತರ ಕೊಡುಗೆ. ಇದು ಶೋಷಣೆ ಹಾಗೂ ವರ್ಗರಹಿತ ಸಮಾಜ ಸ್ಥಾಪನೆಮಾಡುವ ಕಾರ್ಮಿಕ ವರ್ಗಕ್ಕೆ ನೀಡಿದ ಪ್ರಬಲ ಅಸ್ತ್ರವೆಂದರು. ಭಾರತದ ಜನರ ಪರಾಕ್ರಮ ಹಾಗೂ ಮೇಧಾವಿತನಗಳನ್ನು ಮಾರ್ಕ್ಸ್ ಗುರುತಿಸಿದ್ದಾರೆಂದು ಹೇಳಿ, 1957ರಲ್ಲಿ ನಡೆದ ಸಿಪಾಯಿ ದಂಗೆಯನ್ನು ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವೆಂದು ಕರೆದು, ಆ ಕುರಿತು ಹಲವಾರು ಲೇಖನಗಳನ್ನು ಬರೆದಿದ್ದಾರೆ ಹಾಗೂ ಬ್ರಿಟಿಷ್ ವಸಾಹತುಶಾಹಿ ನೊಗದಿಂದ ಭಾರತ ಬಿಡುಗಡೆಯಾಗುವ ಮಾರ್ಗವನ್ನೂ ಮಾರ್ಕ್ಸ್ ಸೂಚಿಸಿದ್ದಾರೆಂದು ಸಭಿಕರಿಗೆ ತಿಳಿಸಿದರು. ಕಮ್ಯುನಿಸ್ಟ ವ್ಯವಸ್ಥೆಯಲ್ಲಿ ವ್ಯಕ್ತಿತ್ವಕ್ಕೆ ಬೆಲೆಯಿಲ್ಲವಲ್ಲ ಎಂದು ಸಭಿಕರು ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾ, ಹಿಂದಿನ ಎಲ್ಲಾ ಸಾಮಾಜಿಕ ವ್ಯವಸ್ಥೆಗಳಲ್ಲೂ ಮನುಷ್ಯತ್ವ ಅತಿ ಕೀಳು ಮಟ್ಟದಲ್ಲಿತ್ತು; ಆದರೆ ಸಮಾಜವಾದಿ ವ್ಯವಸ್ಥೆಯಲ್ಲಿ ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ ಅವಕಾಶವಿದೆಯೆಂಬುದನ್ನು ವಿವರಿಸಿದರು. ಕಾರ್ಮಿಕ ವರ್ಗದಲ್ಲಿ ಕ್ರಾಂತಿಕಾರಿ ಪ್ರಜ್ಞೆ ಬೆಳೆಯದಂತೆ ತಡೆಗಟ್ಟಲು ಬಂಡವಾಳಶಾಹಿಗಳೂ ಸಾಮ್ರಾಜ್ಯಶಾಹಿಗಳೂ ಮಾರ್ಕ್ಸ್‌ವಾದವನ್ನು ಅಭ್ಯಸಿಸುತಾರೆನ್ನುವ ಅಂಶವನ್ನು ಗಮನಿಸುವ ಅವಶ್ಯಕತೆಯನ್ನು ಆವರು ತಿಳಿಹೇಳಿದರು.

ಸಭೆಯ ಆರಂಭದಲ್ಲಿ ಸ್ವಾಗತಿಸಿದ ಎಸ್. ಎಫ್. ಐ. ಟೌನ್ ಸಮಿತಿ ಅಧ್ಯಕ್ಷ ಕೆ. ವಿಶ್ವನಾಥ, ಎಸ್.ಎಫ್.ಐ. ಮತ್ತು ಡಿ.ವೈ.ಎಸ್.ಐ. ಸಂಘಟನೆಗಳು ವಿದ್ಯಾರ್ಥಿ ಹಾಗೂ ಯುವಜನರ ಬೇಡಿಕೆಗಳಿಗೆ ಹೋರಾಡುವ ಸಂದರ್ಭಲ್ಲೇ ದೇಸದ ದುಡಿಯುವ ಜನತೆಯ ಹೋರಾಟಗಳನ್ನೂ ಬೆಂಬಸಸುವ ಧೋರಣೆಗಳನ್ನು ಹೊಂದಿವೆ ಎಂದು ತಿಳಿಸಿದರು. ಡಿ.ವೈ.ಎಸ್.ಐ. ತಾಲ್ಲೂಕು ಸಮಿತಿ ಕಾರ್ಯದರ್ಶಿ ವಿ. ಮಹಾಬಲ ವಂದಿಸಿದರು.

ಕಾರ್ಯಕ್ರಮದ ಕೊನೆಯಲ್ಲಿ 'ಕುಂದಾಪುರ ಸಮುದಾಯ' 'ಬೆಲ್ಚಿ' ನಾಟಕವನ್ನು ಪ್ರದರ್ಶಿಸಿತು.

ವರದಿ : ವಿಶ್ವ

ದೆಹಲಿಯಲ್ಲಿ ಮಾರ್ಕ್ಸ್ ಮರಣ ಶತಾಬ್ಧಿ ಆಚರಣೆ

ದೆಹಲಿಯ ವಿವಿಧ ಭಾಗಗಳಲ್ಲಿ ಹಾಗೂ ಶಾಲಾ ಕಾಲೇಜುಗಳಲ್ಲಿ ಮಾರ್ಕ್ಸ್‌ರ ಜೀವನ ಮತ್ತು ಬೋಧನೆಗಳನ್ನು ಜನಪ್ರಿಯಗೊಳಿಸುವ ಒಂದು ವಾರದ ಕಾರ್ಯಕ್ರಮವನ್ನು ಮಾರ್ಚಿ 14ರಂದು ಕಾರ್ಲ್‌ಮಾರ್ಕ್ಸ್ ಮರಣ ಶತಾಬ್ಧಿಯನ್ನು ಆಚರಿಸುವ ಮೂಲಕ ಆರಂಭಿಸಲಾಯಿತು. ಸಿ. ಪಿ. ಎಂ.ನ ಪೊಲಿಟ್ ಬ್ಯೂರೋ ಸದಸ್ಯರಾದ ಕಾ. ಹರ್‌ಕಿಶನ್‌ಸಿಂಗ್ ಸುರ್ಜೀತ್‌ರವರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಮಾನವ ಚಿಂತನೆಗೆ ಕಾರ್ಲ್‌ಮಾರ್ಕ್ಸ್‌ರು ನೀಡಿದ ಕಾಣಿಕೆಯು ಹೇಗೆ ಇಡೀ ಜಾಗತಿಕ ಇತಿಹಾಸದ ಮೇಲೆ ತನ್ನ ಪ್ರಭಾವ ಬೀರಿತು ಮತ್ತು ಕಾರ್ಲ್‌ಮಾರ್ಕ್ಸ್‌ರು ಮಾನವರ ಸಮಸ್ಯೆಗಳಿಗೆ ಸಿದ್ಧಪಡಿಸಿದ ಪರಿಹಾರಗಳನ್ನು ಒದಗಿಸುವ ಸಂತರಾಗದೆ, ತತ್ವಜ್ಞಾನದ ರಾಜಕೀಯ ಅರ್ಥಶಾಸ್ತ್ರದ ಮತ್ತು ಸಮಾಜವಾದೀ ಕಲ್ಪನೆಗಳಿಗೆ ವೈಜ್ಞಾನಿಕ ತಳಹದಿಯನ್ನು ಕೊಟ್ಟು ಅದನ್ನು ದ್ವಂದ್ವಮಾನ ಭೌತವಾದೀ ತತ್ವಶಾಸ್ತ್ರವನ್ನಾಗಿಯೂ, ಚಾರಿತ್ರಿಕ ಭೌತವಾದವನ್ನಾಗಿಯೂ ಅಧಿಕ ಮೌಲ್ಯ ಸಿದ್ಧಾಂತವನ್ನಾಗಿಯೂ ಪರಿವರ್ತಿಸಿದರೆಂಬುದನ್ನು ವಿವರಿಸಿದರು.

ಕಾ. ಸುರ್ಜಿತ್‌ರವರು ಮುಂದುವರೆದು ಜಗತ್ತನ್ನು ಸರಿಯಾಗಿ ವ್ಯಾಖ್ಯಾನಿಸಿದವರಲ್ಲಿ ಕಾರ್ಲ್ ಮಾರ್ಕ್ಸ್ ಮೊಟ್ಟಮೊದಲನೆಯವರೆಂದೂ ಅಲ್ಲದೆ ಅವರು ಜಗತ್ತನ್ನು ಪರಿವರ್ತಿಸುವ ಹೋರಾಟದಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಿದರೆಂಬುದಾಗಿ ಹೇಳಿದರು.

ಶ್ರಮಿಕ ವರ್ಗದ ಪ್ರಬಲ ಅಸ್ತ್ರ

(4ನೇ ಪುಟದಿಂದ)

ಮಾರ್ಕ್ಸ್‌ವಾದ, ಶ್ರಮಿಕ ವರ್ಗದ ಪ್ರಬಲ ಶಕ್ತಿ : ಮಾರ್ಕ್ಸ್ ಹೇಳುವಂತೆ, ಸಾಮಾಜಿಕ ಬದಲಾವಣೆ ಮತ್ತು ಬೆಳವಣಿಗೆಯ ವಿಜ್ಞಾನವು ಜನಸಾಮಾನ್ಯರನ್ನು ಸೇರಿದಾಗ ಅದೊಂದು ಅವರ ಪ್ರಬಲವಾದ ಭೌತಿಕ ಶಕ್ತಿಯಾಗುವುದು. ಮಾರ್ಕ್ಸ್‌ರ ದ್ವಂದ್ವಮಾನ ಭೌತವಾದವು ಪ್ರಪಂಚವನ್ನು ಸಮಾಜವನ್ನು ವೈಜ್ಞಾನಿಕವಾಗಿ ಹೆಚ್ಚುಹೆಚ್ಚು ತಿಳಿಯಬಹುದಲ್ಲದೆ, ಅವುಗಳನ್ನು ಮಾನವನ ಸರ್ವತೋಮುಖವಾದ ಅಭಿವೃದ್ಧಿಗೆ ಬದಲಾಯಿಸಿಕೊಳ್ಳಲು ಸಾಧ್ಯವಿದೆ. ಅಂತಹ ಬದಲಾವಣೆ ಅವನು ಹೊರಗಿನ ಯಾವುದೇ ಅಮಾನುಷ, ದೈವಿಕ ಶಕ್ತಿಯನ್ನು ಮೊರೆ ಹೋಗಬೇಕಾಗಿಲ್ಲ. ವರ್ಗ ಪ್ರಜ್ಞೆಯೇ ಅವನ ಪ್ರಬಲ ಅಸ್ತ್ರವಾಗುವುದು ●

ಮೈಸೂರು

ಕಾರ್ಲ್‌ಮಾರ್ಕ್ಸ್ ಮರಣ ಶತಾಬ್ಧಿ ವಿಚಾರ ಸಂಕಿರಣ

ಕಾರ್ಲ್ ಮಾರ್ಕ್ಸ್‌ರ ಮರಣ ಶತಾಬ್ಧಿಯ ಅಂಗವಾಗಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ ಪಾರ್ಟಿಯ ಮೈಸೂರು ಘಟಕದ ಆಶ್ರಯದಲ್ಲಿ ತಾ॥ 20ರಂದು ಟೌನ್ ಹಾಲಿನಲ್ಲಿ ವಿಚಾರ ಸಂಕಿರಣ ನಡೆಸಲಾಯಿತು. ಪ್ರೊ॥ ಶ್ರೀನಿವಾಸ್ ಅವರು ಮಾರ್ಕ್ಸ್‌ವಾದ ಮತ್ತು ಪೌರ್ವಾತ್ಯ ಸಿದ್ಧಾಂತ, ಕಾ. ಸೋಮಸುಂದರ ಶರ್ಮಾರವರು ಮಾರ್ಕ್ಸ್ ಮತ್ತು ಅವರ ಸಿದ್ಧಾಂತ ಹಾಗೆಯೇ ಕಾ. ಎನ್. ಕೆ. ಉಪಾಧ್ಯಾಯರು ಶಾಂತಿಗೆ ಮಾರ್ಕ್ಸ್‌ವಾದದ ಕೊಡುಗೆ ಈ ವಿಷಯಗಳ ಕುರಿತು ಭಾಷಣ ಮಾಡಿದರು. ಕಾ. ಎಂ. ಎನ್. ಉಗ್ರಪ್ಪನವರು ಅಧ್ಯಕ್ಷತೆ ವಹಿಸಿದ್ದು, ಕಾ. ಮೋಹನ ಕುಮಾರ ಸ್ವಾಗತಿಸಿದರು. ಕಾ. ರಾಜೇಂದ್ರ ವಂದನಾರ್ಪಣೆ ಮಾಡಿದರು.

ಊರುಕೆರೆ :

ರೈತರ ಧರಣಿ ಸತ್ಯಾಗ್ರಹ

ದಿನಾಂಕ 9-3-83ರಂದು ತುಮಕೂರು ಜಿಲ್ಲೆಗೆ ಸೇರಿದ ಊರುಕೆರೆ ಗ್ರೂಪ್ ಪಂಚಾಯ್ತಿಗೆ ಒಳಪಟ್ಟ ಗ್ರಾಮಗಳಲ್ಲಿ ಅವಶ್ಯಕವಾಗಿ ಕೈಗೊಳ್ಳಬೇಕಾಗಿದ್ದ ತುರ್ತು ಅಭಿವೃದ್ಧಿ ಕಾರ್ಯಗಳ ಬಗ್ಗೆ ರೈತ ಸಂಘವು ವಿವರಣೆ ಕೇಳಿ ಊರುಕೆರೆ ಪಂಚಾಯ್ತಿ ಅಧ್ಯಕ್ಷರಿಗೆ ಬರೆದ ಪತ್ರಕ್ಕೆ ಉತ್ತರಿಸದೆ ಉದಾಸೀನ ತೋರಿಸಿದ್ದಕ್ಕಾಗಿ ಮತ್ತು ಸಂಘದ ಸಲಹೆಗಳನ್ನೆಲ್ಲಾ ತಿರಸ್ಕರಿಸಿದ್ದಕ್ಕಾಗಿ ಪ್ರತಿಭಟನೆ ವ್ಯಕ್ತಪಡಿಸುವ ಸಲುವಾಗಿಸಂಘದ ಪ್ರಮುಖ ಪದಾಧಿಕಾರಿಗಳ ಧರಣಿ ಸತ್ಯಾಗ್ರಹವನ್ನು ನಡೆಸಿದರೆಂದು ಪ್ರಕಟಣೆ ತಿಳಿಸಿದೆ.

ನಂತರ ಪಂಚಾಯ್ತಿ ಅಧ್ಯಕ್ಷರು ಸಂಘದ ಬೇಡಿಕೆಗಳನ್ನು ಪರಿಶೀಲಿಸುವ ಆಶ್ವಾಸನೆಯನ್ನು ನೀಡಿದರೆಂದು ತಿಳಿದುಬಂದಿದೆ.

ಶ್ರೀ ಎ. ಕೆ. ಸುಬ್ಬಯ್ಯನವರಿಗೆ ಈ 'ಸರ್ವಾಧಿಕಾರ' ಕೊಟ್ಟಿದ್ದು ಯಾರು?

ಶ್ರೀಮಾನ್ ಎ. ಕೆ. ಸುಬ್ಬಯ್ಯನವರು ಇತ್ತೀಚೆಗೆ ಬಹಳಷ್ಟು 'ಹೇಳಿಕೆ'ಗಳನ್ನು ಕೊಡುತ್ತಾ ಬರುತ್ತಿದ್ದಾರೆ. ಪ್ರತಿದಿನವೂ ಅವರ ಹೆಸರು 'ಪತ್ರಿಕೆಗಳಲ್ಲಿ' ಬರಬೇಕೆಂಬುದೇ ಅವರ ದೃಷ್ಟಿ ಇದ್ದ ಹಾಗೆ ಕಾಣುತ್ತದೆ. ಈ ಹೇಳಿಕೆಗಳಲ್ಲಿ ಒಂದು ಇನ್ನೊಂದಕ್ಕೆ ವಿರೋಧವಾಗಿರುತ್ತದೆ. ಬಿ. ಜೆ. ಪಿ. ಪಕ್ಷವು 'ತತ್ವಬದ್ಧ ನಿಯಮಗಳನ್ನು ತಾಳಿರುವ ಪಕ್ಷ' ವೆಂದು ಹೇಳಿಕೊಳ್ಳುತ್ತಿರುವುದಕ್ಕೆ ತೀರಾ ವಿರೋಧವಾಗಿದೆ ಶ್ರೀಮಾನ್ ಎ. ಕೆ. ಸುಬ್ಬಯ್ಯನವರ ನಡವಳಿಕೆ.

ಒಂದು ದಿನ "ಜನತಾ ಪಕ್ಷದ ಸರಕಾರಕ್ಕೆ ತನ್ನ ಬೆಂಬಲ ನಿಶ್ಚಯ" ವಾಗಿದೆ ಎನ್ನುತ್ತಾರೆ. ಇನ್ನೊಂದು ದಿನ "ಜನತಾ ಸರಕಾರದ ಮುಖ್ಯಮಂತ್ರಿ ಶ್ರೀ ಹೆಗ್ಡೆಯವರು 'ಹೀಗೆ' ಮಾಡದಿದ್ದರೆ, ನಮ್ಮ ಬೆಂಬಲದ ಬಗ್ಗೆ ಪುನರಾಲೋಚನೆ ಮಾಡಬೇಕಾದೀತು" ಎಂದು ಗುಡುಗುತ್ತಾರೆ. ಒಂದುದಿನ "ಜನತಾ ಸರಕಾರವು ಭ್ರಷ್ಟ ಕಾಂಗ್ರೆಸ್‌ನ್ನು ಸೋಲಿಸಿ ಅಧಿಕಾರಕ್ಕೆ ಬಂದಿದೆ" ಎನ್ನುತ್ತಾರೆ; ಇನ್ನೊಂದು ದಿನ "ಜನತಾ ಸರಕಾರವು ಕಾಂಗ್ರೆಸ್ಸಿಗಿಂತ ಭ್ರಷ್ಟಾಚಾರದಲ್ಲಿ ಒಂದು ಹೆಜ್ಜೆ ಮುಂದೆ" ಎನ್ನುತ್ತಾರೆ.

ಜನತಾ ಪಕ್ಷದ ಸರಕಾರಕ್ಕೆ ತಾವು ಬೆಂಬಲಕೊಡುವ ಸೋಗಿನಲ್ಲಿ ನಿಜವಾಗಿ ಜನತಾ ಸರಕಾರಕ್ಕೆ ಬೆಂಬಲಿಸುವ ಶಕ್ತಿಗಳನ್ನು ಜನತಾ ಸರಕಾರದಿಂದ ದೂರಮಾಡಲು ಹವಣಿಸುತ್ತಿದ್ದಾರೆ.

ಒಟ್ಟಿನಲ್ಲಿ ತಾನೇ ಒಬ್ಬ ಶೂರ ರಾಜಕೀಯ ಪುಡಾರಿಯೆಂಬ ಧಾಟಿಯಲ್ಲಿ ಈ ಮಹಾನುಭಾವರ ಹೇಳಿಕೆಗಳಿವೆ.

ಜನತೆ ಈ ಬಗ್ಗೆ ಜಾಗ್ರತರಾಗಿರಬೇಕು ಎಂದು ವಿಚಾರಿಸಲು ನಾನು ಇಲ್ಲಿ ಬಯಸುತ್ತೇನೆ.

'ಹಿಂದೂ ಏಕತೆ' ಎಂಬ ಘೋಷಣೆಯಡಿಯಲ್ಲಿ ನಮ್ಮ ರಾಷ್ಟ್ರೀಯತೆಯ ಬುನಾದಿಗೆ ಸವಾಲು ಹಾಕುವ ಜಾತೀಯ – ಅದರಲ್ಲೂ ಬಹುಮತೀಯ ಜಾತೀಯತೆಯನ್ನು ಕೆದರಿಸುವ ಜಾಡಿನಲ್ಲಿ ನಡೆಯುತ್ತಾ ಬರುತ್ತಿರುವ ಶ್ರೀ ಎ. ಕೆ. ಸುಬ್ಬಯ್ಯನಂಥವರ ಬಗ್ಗೆ ತೀವ್ರ ಜಾಗ್ರತೆಯಾಗಿರುವುದು ಅತ್ಯಗತ್ಯವಾಗಿದೆ.

ಭಾರತದ ಬುನಾದಿಯೇ ಜಾತ್ಯಾತೀತತೆ ಅದಕ್ಕೇ ಸವಾಲು ಹಾಕುತ್ತಿದ್ದಾರೆ ಶ್ರೀ ಎ.ಕೆ. ಸುಬ್ಬಯ್ಯನವರು.

"ಸರ್ವ ಧರ್ಮಗಳು ಜತೆ ಜತೆಯಲ್ಲಿ ಬಾಳಿ ಬೆಳಗಲೀ" ಎಂಬುದೇ ಭಾರತದ ಐಕ್ಯತೆಯ ಬುನಾದಿ. ಇದನ್ನೇ ಕೆದಕುತ್ತಿದ್ದಾರೆ ಶ್ರೀಮಾನ್ ಎ. ಕೆ. ಸುಬ್ಬಯನವರು,

ಅದರಲ್ಲೂ ಇತ್ತೀಚೆಗೆ ಕಾರ್ಮಿಕ ವರ್ಗದ ಮಧ್ಯೆ ಜಾತೀಯ ವಿಷ ಬೀಜ ಬಿತ್ತಲು ಮುಂದೆ ಬಂದಿದ್ದಾರೆ ಈ ಮಹನೀಯರು.

ತಾನೇ ಜನತೆಯ ಏಕೈಕ ವೀರ, ಅದರಲ್ಲೂ ಈಗ ಕಾರ್ಮಿಕ ವರ್ಗದ ಹಿತರಕ್ಷಕ ಎಂದು ಶ್ರೀಮಾನ್ ಎ. ಕೆ. ಸುಬ್ಬಯ್ಯನವರು ಡಂಗುರ ಹೊಡೆಯುತ್ತಿದ್ದಾರೆ.

ಬಹುರಾಷ್ಟ್ರೀಯ ಕಂಪನಿಗಳ 'ಏಜೆಂಟಾಗಿ' ಮುಂದೆ ಬರುತ್ತಿದ್ದಾರೆ.

ಜಮ್‌ಶೆಡ್‌ಪುರ, ಮೊರಾದಾಬಾದ್, ಅಲೀಪುರ. ಮಂಗಳೂರು ಪ್ರತಿಯೊಂದು ಕಡೆಗಳಲ್ಲಿ ಈ ಮಹನೀಯರ 'ಪರಂಪರೆ' ಯವರು ಏನು ಮಾಡುತ್ತಾ ಬರುತ್ತಿದ್ದಾರೆ ಎಂಬುದಕ್ಕೆ ಬೇರೇ ಮಾತು ಬೇಕೇ?

ಈಗ ಸಿ. ಐ. ಟಿ. ಯು. ಮತ್ತು ಎ. ಐ. ಟಿ. ಯು. ಸಿ. ಯಂತಹ ಜಾತ್ಯಾತೀತ ಸಂಘಟನೆಗಳ ಸ್ಥಾನದಲ್ಲಿ ಜಾತೀಯತೆಯ ವಿಷವನ್ನು ಜಾತ್ಯಾತೀತದ ಪ್ರತೀಕದಂತಿರುವ ಕಾರ್ಮಿಕ ವರ್ಗದಲ್ಲಿ ಬಿತ್ತಲು ಸಾಮ್ರಾಜ್ಯಶಾಹಿಗಳ ನವವಸಾಹತುಶಾಹಿ ಧೋರಣೆಯನ್ನು ಕರ್ನಾಟಕದಲ್ಲಿ ಹಬ್ಬಿಸಲು ಪ್ರಯತ್ನಿಸುತ್ತಿದ್ದಾರೆ.

ಇತ್ತೀಚೆಗೆ ಒಂದು ಹೇಳಿಕೆಯಲ್ಲಿ ಕಮ್ಯೂನಿಷ್ಟರ ಬೆಂಬಲ ಜನತಾ ಸರಕಾರಕ್ಕೆ ಯಾಕೆ ನಮ್ಮ ಬೆಂಬಲವಿದ್ದರೆ ಸಾಕು" ಎಂದು ಹೇಳುವಷ್ಟು ಮುಂದುವರಿದಿದ್ದಾರೆ – ಅದೂ ಜನತಾ ಪಕ್ಷದ ಸರಕಾರಕ್ಕೆ ಬೆಂಬಲಕೊಡುವ ಧಾಟಿಯಲ್ಲಿ....

ತನ್ನ ಬಿ. ಜೆ. ಪಿ. ಪಕ್ಷವು 115 ಸೀಟುಗಳಲ್ಲಿ ನಿಂತು 77 ಸೀಟುಗಳಲ್ಲಿ ಡಿಪಾಜಿಟ್ ಕಳೆದು. ಪ್ರತಿ ಪಕ್ಷಗಳ ಓಟುಗಳನ್ನು ಎಷ್ಟು ಒಡೆಯಲು ಸಾಧ್ಯವೋ ಅಷ್ಟು ಒಡೆದು ಕಾಂಗ್ರೆಸ್‌ನ್ನು ಅಧಿಕಾರದಿಂದ ಕೆಳಗಿಳಿಸಬೇಕು ಎಂಬ ಜನತೆಯ ಕಳಕಳಿಯ ದುರುಪಯೋಗಮಾಡಿ, 18 ಸೀಟುಗಳಿಸಿದ ಈ ಬಿ.ಜೆ.ಪಿ. ಮಹನೀಯರುಗಳು – ಅವರ ಅಕ್ಕರೆಯ ಮುಂದಾಳು ಶ್ರೀ ಎ. ಕೆ. ಸುಬ್ಬಯ್ಯನವರು ಇದೀಗ ತಾನೆ ಅನಭಿಷಿಕ್ತ ಮಹಾರಾಜ ಎಂಬ ಧಾಟಿಯಲ್ಲಿ ಮಾತಾಡುತ್ತಿದ್ದಾರೆ.

ಶ್ರೀಮಾನ್ ಎ. ಕೆ. ಸುಬ್ಬಯ್ಯನವರೇ, ನಿಮ್ಮ 'ಗಾಂಧೀ ಸಮಾಜವಾದ'ದ ಅರಿವಾಗಲು ಜನತೆಗೆ ಹೆಚ್ಚು ಕಾಲಬೇಡ. ನಿಮ್ಮ ಇಡೀ ವಾದವು ಗುತ್ತೇದಾರಿ ಬಂಡವಾಳಶಾಹಿಗಳಿಗೆ, ಸಾಮ್ರಾಜ್ಯಶಾಹಿ ಏಜೆಂಟರಿಗೆ ಬಹುರಾಷ್ಟ್ರೀಯ ಕಂಪನಿಗಳಿಗೆ ಅನುಕೂಲವಾದ ವಾದವೆಂಬುದನ್ನು ತಿಳಿಯಲು ಕರ್ನಾಟಕದ ಜನತೆಗೆ ಹೆಚ್ಚು ಕಾಲ ಬೇಡ....

ಕಮ್ಯುನಿಸ್ಟ್ ವಿರೋಧಿ ನಿಮ್ಮ ಹೇಳಿಕೆಗಳಿಂದಲೇ ನಿಮ್ಮ ಹಿಂದೆಯೂ ಫೇಸಿಸ್ಟರು ತಮ್ಮ ಜೀವನವನ್ನು ಆರಂಭ ಮಾಡಿದರು ಎಂಬುದನ್ನು ಮರೆಯಬೇಡಿ. ಚರಿತ್ರೆಯಲ್ಲಿ ಅವರ ಗತಿ ಏನಾಯಿತು ಎಂಬುದನ್ನು ನೆನಪು ಮಾಡಿಕೊಳ್ಳಿ. ನಿಮಗಾಗಲೀ, ನಿಮ್ಮ ಪಕ್ಷಕ್ಕಾಗಲಿ ಅಂತಹ ಅಧಿಕಾರ ಯಾರೂ ಕೊಡಲಿಲ್ಲ ಎಂಬುದನ್ನು ನೆನಪಿನಲ್ಲಿಡಿ!

ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಗಳ ನೌಕರರ ಭಾರಿ ಮತ ಪ್ರದರ್ಶನ

ಕರ್ನಾಟಕ ರಾಜ್ಯದಲ್ಲಿ ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಗಳಲ್ಲಿ 35 ಸಾವಿರಕ್ಕೂ ಮೇಲ್ಪಟ್ಟು ದಿನಗೂಲಿ ಕೆಲಸಗಾರರು ದುಡಿಯುತ್ತಿದ್ದಾರೆ. ಇಂಜಿನಿಯರಿಂದ ಹಿಡಿದು ಸಾದಾ ಕಾರ್ಮಿಕನವರೆಗೆ ಯುವಕರೂ ಯುವತಿಯರೂ ನೌಕರಿಯ ಭದ್ರತೆಯಿಲ್ಲದೆ, ಇತರ ಸೌಲಭ್ಯಗಳಿಲ್ಲದೆ, ಹಲವಾರು ವರ್ಷಗಳಿಂದಲೂ ದುಡಿಯುತ್ತಿದ್ದಾರೆ. 240 ದಿನ ಕೆಲಸ ಮಾಡಿರುವ ಎಲ್ಲರನ್ನೂ ಖಾಯಂ ಮಾಡಬೇಕೆಂದೂ, ನಿಗದಿಯಾದ ಕನಿಷ್ಟ ಕೂಲಿ ಕೊಡಬೇಕೆಂದೂ ಕೇಳಿ ಹದಿನಾರು ಜಿಲ್ಲೆಗಳ ಹತ್ತು ಸಾವಿರಕ್ಕೂ ಮೇಲ್ಪಟ್ಟು ಕೆಲಸಗಾರರು, ನೂರಾರು ಮಹಿಳೆಯರನ್ನೊಳಗೊಂಡು ತಮ್ಮ ಬೇಡಿಕೆಗಳನ್ನು ಪೂರೈಸುವ ಸಲುವಾಗಿ ಸರಕಾರದ ಮೇಲೆ ಒತ್ತಾಯ ತರಲು 14–3–83ರಂದು ಬೆಂಗಳೂರಿನಲ್ಲಿ ಬೃಹತ್ ಮತ ಪ್ರದರ್ಶನ ನಡೆಸಿದರು. ತಮ್ಮ ಸಂಕಷ್ಟಗಳನ್ನು ಕೇಳಲು ಯಾವ ಮಂತ್ರಿಯೂ ಬಾರದಿದ್ದಾಗ, ಕೆ.ಆರ್ ಸರ್ಕಲ್‌ನಿಂದ ಗೋಪಾಲಗೌಡ ಸರ್ಕಲ್‌ವರೆಗೆ ಮತಪ್ರದರ್ಶನಗಾರರು ರಸ್ತೆಯಲ್ಲೇ ಕುಳಿತು ರಾತ್ರಿ 8 ಗಂಟೆಯವರೆಗೂ ರಸ್ತೆ ಬಂದ್ ಮಾಡಿದಾಗ ಮುಖ್ಯ ಮಂತ್ರಿ ರಾಮಕೃಷ್ಣ ಹೆಗಡೆ, ಲೋಕೋಪಯೋಗಿ ಮಂತ್ರಿ ದೇವೇಗೌಡ ಮೊದಲಾದವರನ್ನು ಸಿ. ಐ. ಟಿ. ಯು. ಅಧ್ಯಕ್ಷರಾದ ಸೂರ್ಯನಾರಾಯಣರಾಯರು ಮತಪ್ರದರ್ಶನ ನಡೆಯುವಲ್ಲಿಗೆ ಕರೆದುಕೊಂಡು ಬಂದು. ಮನವಿಯನ್ನರ್ಪಿಸಿದರು. ಬೇಡಿಕೆಗಳನ್ನು ಸಹಾನುಭೂತಿಯಿಂದ ಬಗೆಹರಿಸಲು ಪ್ರಯತ್ನಿಸಲಾಗುವುದೆಂದು ಮಂತ್ರಿದ್ವಯರು ಆಶ್ವಾಸನೆ ನೀಡಿದನಂತರ ಮತಪ್ರದರ್ಶನ ಮುಕ್ತಾಯವಾಯಿತು. ಕರ್ನಾಟಕ ರಾಜ್ಯದ ದುಡಿಯುವ ಜನತೆಯ ಹೋರಾಟದಲ್ಲಿ ತಾ. 14ರಂದು ಬೆಂಗಳೂರಿನಲ್ಲಿ ನಡೆದ ಲೋಕೋಪಯೋಗಿ–ನೀರಾವರಿ ಕೆಲಸಗಾರರ ಈ ಮತಪ್ರದರ್ಶನ ಒಂದು ಮೈಲಿಗಲ್ಲಾಗಿದೆ. ಈ ಕೆಲಸಗಾರರನ್ನು ಸರಿಯಾಗಿ ಸಂಘಟಿಸಿ ರಾಜ್ಯಾದ್ಯಂತ ಹೋರಾಟಕ್ಕೆ ಸಿದ್ಧತೆ ನಡೆಸುವುದು ಆದ್ಯ ಕರ್ತವ್ಯ.

೨೬-೨-೮೩ ರಂದು ರಾಯಚೂರು ಯಶಸ್ವಿ ಬಂದ್

ರಾಯಚೂರು ಜಿಲ್ಲಾ ನಿರುದ್ಯೋಗಿ ಯುವಜನ ಹೋರಾಟ ಸಮಿತಿಯು ಜನವರಿ 26ರಿಂದ ಒಂದು ತಿಂಗಳು ಉಪವಾಸ ಸತ್ಯಾಗ್ರಹವನ್ನು 26-2-83 ರಂದು ಇಡೀ ರಾಯಚೂರು ಯಶಸ್ವಿ ಬಂದ್ ಆಚರಣೆಯೊಂದಿಗೆ ಕೊನೆಗೊಳಿಸಿತು.

25–3–83ರೊಳಗೆ ನಿರುದ್ಯೋಗಿಗಳ ಬೇಡಿಕೆಗಳನ್ನೆಲ್ಲಾ ಈಡೇರಿಸುತ್ತೇನೆಂದು ಆಶ್ವಾಸನೆ ಕೊಟ್ಟ ಜಿಲ್ಲಾಧಿಕಾರಿಗಳು, ಕೆ. ಪಿ. ಸಿ. ಮತ್ತು ಉದ್ಯೋಗ ವಿನಿಮಯ ಕೇಂದ್ರದ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿ ನಂತರ 24–7–83ರಂದು ಹೋರಾಟ ಸಮಿತಿಯ ಪದಾಧಿಕಾರಿಗಳೊಂದಿಗೆ ಮಾತುಕತೆ ನಡೆಸಿ, ಕೆಲವು ಬೇಡಿಕೆಗಳನ್ನು ಈಡೇರಿಸುವುದಾಗಿ ತಮ್ಮ ಹಾಗೂ ಕೆ. ಪಿ. ಸಿ. ಅಧಿಕಾರ ಪರಧಿ ಮೀರಿ ಬರುವ ಬೇಡಿಕೆಗಳನ್ನು ಈಡೇರಿಸಲಾಗುವುದಿಲ್ಲವೆಂದು ಹೇಳಿ, ಈ ಕೆಳಗಿನ ಬೇಡಿಕೆಗಳನ್ನು ಈಡೇರಿಸಿದರು.

(1) ಉದ್ಯೋಗ ವಿನಿಮಯ ಕೇಂದ್ರದಲ್ಲಿ ಸೀನಿಯಾರಿಟಿ ಲಿಸ್ಟ್ ಪ್ರತಿ ತಿಂಗಳು ಹಚ್ಚುವುದು. ಕೆ.ಪಿ.ಸಿ.ಯಲ್ಲಿ ಪಾವ್ ಕಾರ್ಪೊರೇಟೀವ್ ನೌಕರಿಗಾಗಿ ಸಂದರ್ಶನಗಳನ್ನು ಕರೆಯುವಾಗ ಸ್ಥಳೀಯ ಪತ್ರಿಕೆಗಳಲ್ಲಿ ಹಾಕುವುದು.

(2) ಡಿಪ್ಲೊಮಾ ಪದವೀಧರರಿಗೆ ರಾಯಚೂರಿನಲ್ಲಿಯೇ ಸಂದರ್ಶನವನ್ನು ಕರೆಸುವುದು.

(3) ಈ ಎಲ್ಲಾ ನೇಮಕಾತಿಗಳಲ್ಲಿ 64.5% ಜಿಲ್ಲೆಯ ನಿರುದ್ಯೋಗಿಗಳಿಗೆ ಆದ್ಯತೆ ಕೊಟ್ಟಿದ್ದಾರೆ, ಇನ್ನು ಮುಂದೆ ನಡೆಯುವ ನೇಮಕಾತಿಗಳಲ್ಲಿಯೂ 65% ಆದ್ಯತೆ ಕೊಡಿಸುವುದಾಗಿ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಆದರೆ ಅತಿ ಮುಖ್ಯವಾದ ಬೇಡಿಕೆಗಳಾದ ವಿಂಗ್ ಸಿಸ್ಟಮ್ ಮುಂದುವರೆಸುವ ಬಗ್ಗೆ ಮತ್ತು ಕಾಂಟ್ರಾಕ್ಟ್ ಲೇಬರ್‌ಸರನ್ನು ಖಾಯಂಗೊಳಿಸುವ ಬಗ್ಗೆ ಯಾವುದೇ ಚಕಾರವೆತ್ತಿಲ್ಲ. ಆದ್ದರಿಂದ ಹೋರಾಟ ಸಮಿತಿಯು 26–2–83ರಂದು ನಡೆಸಬೇಕೆಂದು ತೀರ್ಮಾನಿಸಿದ 'ರಾಯಚೂರು ಬಂದ್' ಕರೆಯನ್ನು ಹಿಂತೆಗೆದುಕೊಳ್ಳಲಿಲ್ಲ ರಾಯಚೂರು ಬಂದ್ ಮಾಡಿದರೆ ಬಂಧಿಸುವುದಾಗಿ ಜಿಲ್ಲಾಧಿಕಾರಿಗಳು ಯುವಕರಿಗೆ ಬೆದರಿಕೆಯೊಡ್ಡಿ ಅರ್ಧಂಬರ್ಧ ಈಡೇರಿಸಿದ ಬೇಡಿಕೆಗಳನ್ನು ಪೂರ್ತಿ ಈಡೇರಿಸಿದ್ದೇವೆ ಎಂಬಂತೆ ಪತ್ರಿಕಾ ಪ್ರಕಟಣೆ ಕೊಟ್ಟು ಜನತೆಯಲ್ಲಿ ಗೊಂದಲವೇರ್ಪಡಿಸಿದರು.

ಹೋರಾಟ ಸಮಿತಿಯು ನ್ಯಾಯಯುತ ಬೇಡಿಕೆಗಳ ಈಡೇರಿಕೆಗೆ, ಅವರು ಕೊಟ್ಟ ಬಂದ್ ಕರೆಗೆ ಓಗೊಟ್ಟು ರಾಯಚೂರಿನ ಅನೇಕ ಪ್ರಜಾಸತ್ತಾತ್ಮಕ ಸಂಘಟನೆಗಳು ತಮ್ಮ ದಿನದ ಕಾರ್ಯಕಲಾಪವನ್ನು ಸಂಪೂರ್ಣ ಸ್ಥಗಿತಗೊಳಿಸಿ ಮೆರವಣಿಗೆಯಲ್ಲಿ ಪಾಲ್ಗೊಂಡವು. S. F. I D. Y. F. I. ಯುವ ಜನತಾ, ಯುವ ಮೋರ್ಚಾ, ರಿಕ್ಷಾ ಚಾಲಕರ ಸಂಘ, ಸಿನಿಮಾ ವರ್ಕರ್ಸ್ ದಿನದ ಆಟಗಳನ್ನು ನಿಲ್ಲಿಸಿ, ಕ್ಷೌರಿಕರ ಸಂಘ. ಕಾಯಿಪಲ್ಲೆ ಮಾರುವ ವ್ಯಾಪಾರಸ್ಥರ ಸಂಘ, ಪಟೇಲ್ ರೋಡ್ ವ್ಯಾಪಾರಸ್ಥರ ಸಂಘ, ನೇತಾಜಿ ರೋಡ್ ಮತ್ತು ಗಂಜ್ ಗುಮಾಸ್ತರ ಮತ್ತು ವ್ಯಾಪಾರಸ್ಥರ ಸಂಘ ಮತ್ತು ಬಸ್ ಡಿಪೋ ಸಿಬ್ಬಂದಿ ಮುಂಜಾನೆಯಿಂದ ಸಂಜೆ ಆರು ಘಂಟೆಯವರು ಯಾವುದೇ ವಾಹನಗಳನ್ನು ಚಲಿಸದೆ ನಿಲ್ಲಿಸಿ, ಇತರ ಸಣ್ಣಪುಟ್ಟ ವ್ಯಾಪಾರಸ್ಥರು ತಮ್ಮ ಅಂಗಡಿಗಳನ್ನು ಮುಚ್ಚಿ ಬಂದ್‌ಅನ್ನು ಯಶಸ್ವಿಗೊಳಿಸಿದರು.

ಇನ್ನಿತರ ಬೇಡಿಕೆಗಳ ಬಗ್ಗೆ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಲು ದಿನಾಂಕ 4–3–83ರಿಂದ ಹೋರಾಟ ಸಮಿತಿಯ ಪ್ರತಿನಿಧಿಗಳು ಬೆಂಗಳೂರಿಗೆ ಹೋಗುವುದಾಗಿ ಪ್ರಕಟಿಸಿದರು.

ವರದಿ: ಶಾಂತಯಣ್ಣ ಯರಗೇರ.

ಮಾರ್ಚ್ 28 ನಿರುದ್ಯೋಗ ವಿರೋಧಿ ದಿನಾಚರಣೆ

ಡಿ. ವೈ. ಎಫ್. ಐ. ನ ಕೇಂದ್ರ ಸಮಿತಿಯ ಕರೆಯ ಮೇರೆಗೆ ಮಾರ್ಚ್ 28ರಂದು ಕರ್ನಾಟಕದಾದ್ಯಂತ ನಿರುದ್ಯೋಗ ವಿರೋಧಿ ದಿನವನ್ನು ಆಚರಿಸಲಾಗುತ್ತದೆ.

ಡಿ.ವೈ.ಎಫ್.ಐ.ನ ಬೆಂಗಳೂರು ಜಿಲ್ಲಾ ಸಮಿತಿ ಕೂಡಾ ಪ್ರತಿ ವರ್ಷದಂತೆ ಮಾರ್ಚ್ 28ರಂದು ನಿರುದ್ಯೋಗ ವಿರೋಧೀ ದಿನವನ್ನು ಆಚರಿಸಲಿದೆಯೆಂದು ಕಾರ್ಯದರ್ಶಿ ಕಾ. ಶಿವರಾಂ ಪ್ರಕಟನೆಯಲ್ಲಿ ತಿಳಿಸಿದ್ದಾರೆ. 28ರ ಸೋಮವಾರ ಮಧ್ಯಾಹ್ನ 1 ಗಂಟೆಗೆ ಬೆಂಗಳೂರಿನಲ್ಲಿ ಮೆರವಣಿಗೆಯನ್ನು ಏರ್ಪಡಿಸಿ ಮುಖ್ಯಮಂತ್ರಿಗಳನ್ನು ಭೇಟಿಯಾಗಿ ಮನವಿ ಅರ್ಪಿಸಿದ ನಂತರ ಸಂಜೆ ನಡೆಯುವ ಬಹಿರಂಗ ಸಭೆಯಲ್ಲಿ ಸಿ.ಪಿ.ಐ.(ಎಂ)ನ ರಾಜ್ಯ ಕಾರ್ಯದರ್ಶಿ ಕಾ. ಪಿ. ರಾಮಚಂದ್ರ ರಾವ್ ಹಾಗೂ ಆಹ್ವಾನಿತರಾಗಿ ಯುವಜನ ಸಚಿವರಾದ ಶ್ರೀ ಜೀವರಾಜ ಆಳ್ವ ಹಾಗೂ ಮತ್ತಿತರ ಮುಖಂಡರುಗಳು ಭಾಗವಹಿಸುವರೆಂದು ಪ್ರಕಟನೆಯಲ್ಲಿ ತಿಳಿಸಲಾಗಿದೆ,

ಅಂತರಾಷ್ಟ್ರೀಯ

ಕೊರಿಯಾದಲ್ಲಿ ಹೆಚ್ಚುತ್ತಿರುವ ಅಮೇರಿಕಾದ ಸೈನ್ಯನೆಲೆ

ಸಾಮ್ರಾಜ್ಯಶಾಹಿ ಅಮೇರಿಕಾ ಸಂಯುಕ್ತ ಸಂಸ್ಥಾನವು ದಕ್ಷಿಣ ಕೊರಿಯಾದ ತನ್ನ ಕೈಗೊಂಬೆ ಸರಕಾರದೊಂದಿಗೆ ಸೇರಿ ದ. ಕೊರಿಯಾವನ್ನು ರಂಗಮಂದಿರವನ್ನಾಗಿಸಿಕೊಂಡು ಫೆಬ್ರುವರಿ 1 ರಿಂದ ಏಪ್ರಿಲ್ 15 ರ ವರೆಗೆ ಜಂಟೀ ಸೈನ್ಯ ಮೇಲಾಟವನ್ನು "ಟೀಮ್ ಸ್ಪಿರಿಟ್ 83" ಹೆಸರಿನಲ್ಲಿ ನಡೆಸುತ್ತಲಿದೆ.

ಸಂಯುಕ್ತ ಸಂಸ್ಥಾನದ ಸೈನ್ಯ ಘಟಕಗಳಾದ ಸಿಕ್ಸ್ತ್ ಆರ್ಮಿ, ಫಸ್ಟ್ ಆರ್ಮಿ ಹೆಡ್‌ಕ್ವಾಟರ್ಸ್, ಏಳನೇ ಕಾಲಾಳು • ಸೈನ್ಯ ವಿಭಾಗ, 82 ನೇ ವಾರ್‌ಬೋರ್ನ್ ಲ್ಯಾಂಡಿಂಗ್ ವಿಭಾಗ, 25ನೇ ಸೈನ್ಯದಳ, 43ನೇ ಮುಖ್ಯ ಕ್ಷಿಪಣಿ ನೆಲೆ, ಬಿ-52, ಬಾಂಬರುಗಳು, 6ನೇ ವಿಮಾನದಳ-ಇವೇ ಮೊದಲಾದವುಗಳು ಈ ಸೈನ್ಯಕಾರ್ಯಾಚರಣೆಯಲ್ಲಿ ಭಾಗವಹಿಸಲಿವೆ. ಸಾಮ್ರಾಜ್ಯಶಾಹಿ ಅಮೇರಿಕಾ ಸಂಯುಕ್ತ ಸಂಸ್ಥಾನದ ಆಕ್ರಮಣಕೋರ 70,000 ಯೋಧರು ದಕ್ಷಿಣ ಕೊರಿಯಾದ ಕೈಗೊಂಬೆ ಸರಕಾರದೊಂದಿಗೆ ಸೇರಿ 'ತರಬೇತಿ' ನಡೆಸಲಿದೆ. ಕಾರ್ಯಾಚರಣೆಯಲ್ಲಿ ಬಳಸಲಾಗಿರುವ ಎಲ್ಲವೂ ಆಧುನಿಕ ಯುದ್ಧ ಕಾರ್ಯಾಗಾರಗಳಾಗಿದ್ದು "ಎಂಟರ್ ಪ್ರೈಸ್" ಎಂಬ ಅಮೇರಿಕಾದ ಅತ್ಯಂತ ದೊಡ್ಡ ಅಣುಶಕ್ತಿ ಚಾಲಿತ ವಿಮಾನ ನೆಲೆಯುಳ್ಳ ಹಡಗೂ ಸೇರಿದಂತೆ ಹಲವಾರು ರೀತಿಯ ಯುದ್ಧ ಹಡಗುಗಳು, ವಿಮಾನಗಳು, ಕ್ಷಿಪಣಿಗಳು, ಸೈನ್ಯದಳಗಳನ್ನು ಒಳಗೊಂಡಿದೆ.

"ಟೀಮ್ ಸ್ಪಿರೀಟ್ 83" ಎಂಬ ಹೆಸರಿನಲ್ಲಿ ಸಾಮ್ರಾಜ್ಯಶಾಹಿ ಅಮೇರಿಕ ಸಂಯುಕ್ತ ಸಂಸ್ಥಾನವು ನಡೆಸುತ್ತಿರುವ ಸೈನ್ಯ ಕಾರ್ಯಾಚರಣೆಯು ನೇರವಾಗಿ ಕೊರಿಯಾ ಪ್ರಜಾಸತ್ತಾತ್ಮಕ ಜನತಾ ಗಣರಾಜ್ಯದ ಮೇಲೆ ಧಾಳಿ ನಡೆಸುವ ಪೂರ್ವ ಪೀಠಿಕೆಯಾಗಿದೆ. ಹಾಗು ಕೊರಿಯಾದಲ್ಲಿ ಅಶಾಂತಿ ವಾತಾವರಣ ಸೃಷ್ಟಿಸಿ ಯುದ್ಧಕ್ಕೆ ಎಳೆಯುವ ತಂತ್ರವಾಗಿದೆ.

ಅಮೇರಿಕಾದ ಮಿತಿಮೀರಿದ ಸೈನ್ಯ ಕಾರ್ಯಾಚರಣೆಯು ಹೊಸದಾಗಿ ಕೊರಿಯಾ ಪ್ರದೇಶದಲ್ಲಿ ಯುದ್ಧದ ವಾತಾವರಣವನ್ನು ನಿರ್ಮಿಸಿದ್ದು ಯುದ್ಧವು ಯಾವ ಕ್ಷಣದಲ್ಲೂ ಸ್ಫೋಟಗೊಳ್ಳುವ ಸಾಧ್ಯತೆ ನಿರ್ಮಾಣವಾಗಿದೆ.

ಏಷ್ಯದ ಮತ್ತು ಜಾಗತಿಕ ಮೇಲಾಳ್ತನವನ್ನು ಸ್ಥಾಪಿಸುವ ಮಹದಾಸೆಯಿಂದ ಕಳೆದ ಕೆಲವಾರು ವರ್ಷಗಳಿಂದ ಸಾಮ್ರಾಜ್ಯಶಾಹಿ ಶಕ್ತಿ ಕೊರಿಯಾದ ಸುತ್ತಮುತ್ತ ನೆಲೆಯೂರುತ್ತಲಿವೆ. ಇದು ಜಗತ್ತಿನ ಶಾಂತಿಗೆ ದೊಡ್ಡ ಸವಾಲಾಗಿ ಪರಿಣಮಿಸಲಿದೆ.

ಇಂತಹ ಭಯಾನಕ ಸ್ಥಿತಿಯಲ್ಲಿ ಸಿಲುಕಿರುವ ಕೊರಿಯಾ ಪ್ರಜಾಸತ್ತಾತ್ಮಕ ಜನತಾ ಗಣರಾಜ್ಯದ ಜನತಾ ಸೈನ್ಯದ ಮಹಾ ಸೇನಾನಿಯು ಮುಂಬರುವ ಅಪಾಯವನ್ನು ಅರಿತು ಕಾರ್ಯತತ್ಪರರಾಗಿದ್ದಾರೆ. ಕೊರಿಯಾದ ಜನತಾ ಸೈನ್ಯದ ಎಲ್ಲಾ ಘಟಕಗಳನ್ನು ಕೊರಿಯಾದ ಎಲ್ಲಾ ಜನತಾ ರಕ್ಷಣಾ ದಳದ ಸದಸ್ಯರನ್ನು, ರೈತ-ಕಾರ್ಮಿಕರ ಕೆಂಪು ರಕ್ಷಕದಳ ಮತ್ತು ಯುವಕರ ಕೆಂಪು ದಳವನ್ನು ಫೆಬ್ರವರಿ 1 ರಿಂದ ಏಪ್ರಿಲ್ ಮಧ್ಯದವರೆಗೆ, ತನ್ನ ಸ್ವಯಂ ರಕ್ಷಣಾ ಉದ್ದೇಶದಿಂದ ಯುದ್ಧ ಎದುರಿಸಲು ಅಣಿಗೊಳಿಸಿದ ರೀತಿಯಲ್ಲಿ ದೇಶದ ಸುತ್ತ ಮುತ್ತಲೂ ಕಾವಲಿರಿಸಿದೆ. ಸಾಮ್ರಾಜ್ಯಶಾಹಿ ಧಾಳಿಯನ್ನು ಎದುರಿಸಲು ಸದಾ ಸನ್ನದ್ಧರಾಗಿದ್ದಾರೆ.

ಕೊರಿಯಾದ ಜನತೆ ಶಾಂತಿಯನ್ನು ಪ್ರೀತಿಸುತ್ತಾರೆ, ಅವರು ಯುದ್ಧವನ್ನು ಬಯಸುತ್ತಿಲ್ಲ. ಅಂತೆಯೇ. ಅವರು ಕೊರಿಯಾ ಜನತಾ ಗಣರಾಜ್ಯವನ್ನು ಸಾಮ್ರಾಜ್ಯಶಾಹಿಗಳು ಕಬಳಿಸುವುದಕ್ಕೂ ಬಿಡಲಾರರು. ಸಾಮ್ರಾಜ್ಯಶಾಹಿ ಅಮೆರಿಕ ಯುದ್ಧ ಸಾರಿದಲ್ಲಿ ಪ್ರಜಾಸತ್ತಾತ್ಮಕ ಕೊರಿಯಾ ಜನತಾ ಗಣರಾಜ್ಯದ ಜನ ಒಂದೇ ಶಕ್ತಿಯಾಗಿ ಸಮಾಜವಾದಿ ವ್ಯವಸ್ಥೆಯನ್ನು ಉಳಿಸುವ ಹೋರಾಟಕ್ಕೆ ಮುಂದಾಗುತ್ತಾರೆ.

(ಪಿ. ಡಿ. ಕೃಪೆ)

ಕೊಲೆಗಡುಕ ಶರೋನನ ಬಹಿರಂಗ ತನಿಖೆಯಾಗಲಿ

ಕಳೆದ ಸೆಪ್ಟಂಬರ್ ತಿಂಗಳಲ್ಲಿ ಬೇರುತ್‌ನ ನಿರಾಶ್ರಿತರ ಥಾಣದ ಮೇಲೆ ಅಮಾನುಷ ದಾಳಿ ನಡೆಸಿ ಒಂದು ಸಾವಿರದಷ್ಟು ಜನರನ್ನು ವಧಿಸಿದ ಇಸ್ರೇಲಿನ ಕ್ರೂರ ಸೇನಾನಿ ಮತ್ತು ರಕ್ಷಣಾ ಮಂತ್ರಿ ಏರಿಲ್ ಶರೋನ್‌ನನ್ನು ಪದವಿಯಿಂದ ಕೆಳಗಿಳಿಸಲಾಗಿದೆ. ಆದರೂ ಆತನನ್ನು ಇಸ್ರೇಲಿನ ಮಂತ್ರಿ ಮಂಡಳದಲ್ಲಿ ಖಾತೆ ರಹಿತ ಮಂತ್ರಿಯಾಗಿ ಮುಂದುವರಿಯಲು ಅನುವು ಮಾಡಿಕೊಡಲಾಗಿದೆ. ನರಹತ್ಯೆಯ ಸಂಪೂರ್ಣ ಜವಾಬ್ದಾರಿ ಹೊತ್ತಿರುವ ಮೆನಚಿಮ್ ಬೆಗಿನ್ ನೇತೃತ್ವದ ಸರಕಾರ ಜನಾಭಿಪ್ರಾಯಕ್ಕೆ ಹೆದರಿ ಶರೋನ್‌ನನ್ನು ಕೆಳಗಿಳಿಸುವ ನಾಟಕವಾಡಿದೆ.

ಸಾರ್ವಕಾಲಿಕ ಮಾನವ ವಿರೋಧಿ ಕೊಲೆಗಡುಕನಾದ ಶರೋನ್ ಇನ್ನೂ ನಾಲ್ವರು ಮಿಲಿಟರಿ ಧಂಡನಾಯಕರುಗಳೊಂದಿಗೆ ತನ್ನ ಕೃತ್ಯವನ್ನು ವಿಚಾರಣಾ ಆಯೋಗದ ಮುಂದೆ ಭಂಡತನದಿಂದ ಸಮರ್ಥಿಸಿಕೊಂಡ. ಕಳೆದ ಜೂನ್‌ನಲ್ಲಿ ಲೆಬನಾನ್ ಮೇಲೆ ದಾಳಿ ನಡೆಸುವಲ್ಲಿ, ಪ್ಯಾಲಸ್ಟೈನ್ ನರಮೇಧಗೊಳಿಸಿ 25,000 ಜನರ ಸಾವು ಮತ್ತು 10,000 ಜನರನ್ನು ಬಂಧಿಸುವ ಕಾರ್ಯಾಚರಣೆಯನ್ನು ಮಾಡುವಲ್ಲಿ ಪ್ರಮುಖ ಪಾತ್ರದಾರಿ ಶರೋನ್. ಕಳೆದ ಸೆಪ್ಟಂಬರ್ ತಿಂಗಳಲ್ಲಿ ಈತ ಲೆಬನಾನಿನ ತೀರಾ ಬಲಪಂಥಿಯ ಪಲಂಗೇ ಪಕ್ಷದ ಸೈನ್ಯ ತುಕಡಿಯು ಬೇರುತ್‌ನ ಬಳಿಯ ಸಾಬ್ರ ಮತ್ತು ಚಟಿಲ್ಲಾದಲ್ಲಿನ ನಿರಾಶ್ರಿತರ ತಾಣದ ಮೇಲೆ ದಾಳಿ ನಡೆಸುವಂತೆ ಮಾಡಿ ನಿರಂತರವಾಗಿ ಮೂರು ದಿನಗಳವರೆಗೆ ಹೆಂಗಸರು, ಮಕ್ಕಳು, ಮುದುಕರು ಎನ್ನದೆ ಸರ್ವರನ್ನೂ ವಧಿಸಲು ಕಾರಣನಾದ. ಈ ಅಮಾನುಷ ನರಮೇಧ ಇಸ್ರೇಲ್‌ನ ಒಳಗಡೆ ಮತ್ತು ಹೊರಗಡೆ ತೀವ್ರವಾದ ಜನತಾ ಪ್ರತಿಭಟನೆಗೆ ನಾಂದಿ ಹಾಡಿತು. ಬೆದರಿದ ಬೆಗಿನ್ ಸುಪ್ರೀಂ ಕೋರ್ಟ್ ಅಧ್ಯಕ್ಷ ಯಿಟ್ಜಾಕ್ ಖಾನ್ ನೇತೃತ್ವದ ಮೂರು ಜನರ ವಿಚಾರಣಾ ಆಯೋಗವನ್ನು ನೇಮಿಸಿತು. ಆಯೋಗವು ವಿಚಾರಣೆ ನಡೆಸಿ ಶರೋನನನ್ನು ಮುಖ್ಯ ತಪ್ಪಿತಸ್ಥನನ್ನಾಗಿ ಸಾರಿತು. ವಿಚಾರಣಾ ಆಯೋಗವು ಪ್ರಧಾನ ಮಂತ್ರಿ ಬೆಗಿನ್ ಕೂಡ ನರಮೇಧದಲ್ಲಿ ಪಾಲುದಾರನೆಂದು ಸಾರಿದೆ.

ವಿಚಾರಣಾ ಆಯೋಗದ ವರದಿ ಬರುತ್ತಲೆ ಇಸ್ರೇಲಿನ ಸಚಿವ ಸಂಪುಟ ನಿರಂತರ ಸಭೆಗಳನ್ನು ನಡೆಸಿತು. ಹೊರಗಡೆ ಪರ ಮತ್ತು ವಿರೋಧಿ ಜನರು ಗೆರಾಯಿಸಿ ಗಲಾಟೆ ಮಾಡಿದರು. ಕೊನೆಗೂ 16 ಮತ್ತು ಒಂದು ಮತಗಳ ಅಂತರದಲ್ಲಿ ಶರೋನ್ ರಕ್ಷಣಾ ಮಂತ್ರಿ ಸ್ಥಾನ ಬಿಡುವ ನಿರ್ಣಯ ಕೈಗೊಳ್ಳಲಾಯಿತು. ಶರೋನನನ್ನು ಮಂತ್ರಿಮಂಡಳದಿಂದ ಕಿತ್ತೊಗೆಯದಿರುವುದು ನಿರಾಶ್ರಿತರ ಶಿಬಿರದಲ್ಲಿ ನಡೆದ ಕಗ್ಗೊಲೆಗಳಿಗೆ ಬೆಗಿನ್ ಸರಕಾರ ಪರವಾಗಿರುವುದನ್ನು ಸ್ಪಷ್ಟ ಪಡಿಸುತ್ತದೆ.

ಸಾಬ್ರಾ ಮತ್ತು ಚಟಿಲ್ಲಾದ ನರಮೇಧವನ್ನು ಸೆಪ್ಟಂಬರ್ 16 ರಂದು ನಡೆಸಲು ಯೋಜಿಸಲಾಗಿತ್ತು. ಆದರೆ ಒಂದು ದಿನ ಮೊದಲೇ ನರಮೇಧ ಆರಂಭಿಸಲು ಅನುವು ಮಾಡಿಕೊಡಲಾಯಿತು.

ಪ್ಯಾಲಸ್ಟೈನ್ ವಿಮೋಚನಾ ಸಂಘಟನೆಯ ಅಧ್ಯಕ್ಷರಾದ ಯಾಶರ್ ಅರಾಫತ್‌ರವರು ವಿಚಾರಣಾ ಆಯೋಗದ ವರದಿ ಅಪೂರ್ಣವೆಂದಿದ್ದಾರೆ. ಕ್ರೂರ ನರಹತ್ಯೆಯ ಪ್ರಕರಣದಲ್ಲಿ ಶರೋನನಷ್ಟೇ ಜವಾಬ್ದಾರಿ ಹೊತ್ತಿರುವ ಬೆಗಿನ್ ಮತ್ತು ಆತನ ಮಂತ್ರಿ ಮಂಡಳದ ಬಗ್ಗೆ ನಿರ್ಧಾರಾತ್ಮಕವಾದ ಟೀಕೆಯನ್ನು ವರದಿ ಒಳಗೊಂಡಿಲ್ಲವೆಂದು ಅವರು ಹೇಳಿದರು.

ಕೊಲೆಗಡುಕ ಶರೋನ್ ರಕ್ಷಣಾ ಮಂತ್ರಿ ಸ್ಥಾನದಿಂದ ಕೆಳಗಿಳಿದ. ಆದರೆ ಜನತೆ ಇದಕ್ಕಿಂತ ಮುಖ್ಯವಾಗಿ ಶರೋನನ ಬಹಿರಂಗ ವಿಚಾರಣೆಯನ್ನು ಬಯಸುತ್ತಿದ್ದಾರೆ. ತಕ್ಕ ಶಿಕ್ಷೆಯನ್ನು ನೀಡಲು ಒತ್ತಾಯಿಸುತ್ತಿದ್ದಾರೆ.

(ಪಿ. ಡಿ. ಕೃಪೆ)

ಕುಮಾರ್, ಕುಂದಾಪುರ

ಮಂಗಳೂರು :

ಮೋಟಾರ್ ಟ್ರಾನ್ಸ್‌ಪೋರ್ಟ್ ಕಾರ್ಮಿಕರ ಸಭೆ

ಸಿ. ಐ. ಟಿ. ಯು. ನೇತೃತ್ವದ ಮೋಟಾರ್ ಟ್ರಾನ್ಸ್‌ಪೋರ್ಟ್ ಮತ್ತು ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನ್‌ನ ಕಾರ್ಯಕಾರಿ ಸಮಿತಿ ಸಭೆಯು ತಾ. 13-2-1983 ರಂದು ಯೂನಿಯನ್ನಿನ ಅಧ್ಯಕ್ಷರಾದ ಕಾಂ॥ ಪಿ. ರಾಮಚಂದ್ರರಾವ್ ಎಂ.ಎಲ್.ಎ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಪ್ರಧಾನ ಕಾರ್ಯದರ್ಶಿ ಕಾಂ॥ ಕೆ. ಮೂಸಬ್ಬನವರು ವರದಿ ನೀಡುತ್ತಾ ಹಲವಾರು ಸಾರಿಗೆ ಸಂಸ್ಥೆಗಳು ಕಾರ್ಮಿಕರಿಗೆ ಕೊಡಬೇಕಾದ ರಜಾ ಸಂಬಳ, ಬೋನಸ್ಸು ಹಾಗೂ ಸಮವಸ್ತ್ರ ಕೊಡುತ್ತಾ ಇಲ್ಲ. ಮಾತ್ರವಲ್ಲ ಕಾನೂನು ಪ್ರಕಾರ ಇರಬೇಕಾದ ದಾಖಲೆಗಳನ್ನು ಇಡುತ್ತಿಲ್ಲ. ಈ ಬಗ್ಗೆ ಕಾರ್ಮಿಕ ಇಲಾಖೆಗೆ ಎಷ್ಟೇ ದೂರು ನೀಡಿದರೂ ಆ ಬಗ್ಗೆ ಆ ಇಲಾಖೆಗೆ ಸಂಬಂಧಪಟ್ಟ ಮಾಲಿಕರ ಮೇಲೆ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ. ಪ್ರಮುಖ ಸಾರಿಗೆ ಸಂಸ್ಥೆಯೊಂದು ಕಳೆದ ಎರಡು ವರ್ಷಗಳಿಂದ ಬೋನಸ್ಸು ಕೊಟ್ಟಿಲ್ಲ. ಅನೇಕ ವಿವಾದಗಳು ಕಳೆದ 2 ವರ್ಷಗಳಿಂದ ಲೇಬರ್ ಆಫೀಸಿನಲ್ಲಿ ಇತ್ಯರ್ಥಕ್ಕೆ ಬಾಕಿ ಇದೆ. ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಹಲವಾರು ಬಾರಿ ವಿನಂತಿಸಿದರೂ ಸಂಬಂಧಪಟ್ಟ ಅಧಿಕಾರಿಗಳು ಮೌನವಾಗಿದ್ದಾರೆ. ಎಂದು ತಮ್ಮ ವರದಿಯಲ್ಲಿ ಎತ್ತಿ ತೋರಿಸುತ್ತಾ ಯೂನಿಯನ್ನಿನ ಚಟುವಟಿಕೆಗಳನ್ನು ವಿವರಿಸಿದರು.

ಉಳ್ಳಾಲ, ಸುರತ್ಕಲ್ ಶಾಸಕರಿಗೆ ಅಭಿನಂದನಾ ಸಮಾರಂಭ

ಕಳೆದ ಚುನಾವಣೆಯಲ್ಲಿ ಉಳ್ಳಾಲ ಕ್ಷೇತ್ರದಿಂದ ಆಯ್ಕೆಯಾದ ಶಾಸಕ ಕಾ. ಪಿ. ರಾಮಚಂದ್ರರಾವ್ ಹಾಗೂ ಸುರತ್ಕಲ್ ಕ್ಷೇತ್ರದಿಂದ ವಿಜಯಿಯಾದ ಶ್ರೀ ಲೋಕಯ್ಯಶೆಟ್ಟಿಯವರುಗಳಿಗೆ ಅಭಿನಂದನೆಯನ್ನು ಸಲ್ಲಿಸುವ ಸಮಾರಂಭ ತಾ. 6-3-83 ರಂದು ಸಂಜೆ 6 ಗಂಟೆಗೆ ನಾಗೂರಿಯಲ್ಲಿ ಕಂಕನಾಡಿ ನಾಗರಿಕ ಸಮಿತಿ ಆಶ್ರಯದಲ್ಲಿ ಜರುಗಿತು.

ಸಭೆಯ ಅಧ್ಯಕ್ಷತೆಯನ್ನು ಶ್ರೀ ಕೆ. ಪಿ. ವಿಟ್ಟಲ್‌ರಾವ್, ಅಡ್ವಕೇಟ್‌ರವರು ವಹಿಸಿಕೊಂಡರು. ನಾಗರಿಕ ಸಮಿತಿಯ ಕಾರ್ಯದರ್ಶಿ ಶ್ರೀ ಬಿ. ಯಂ. ಮಾದವನ್‌ರವರು ಕಂಕನಾಡಿ 'ಬಿ' ಗ್ರಾಮ, ಅಳಪೆ, ಮರೋಳಿ, ಪಡೀಲು ಹಾಗೂ ಕಣ್ಣೂರು ಪ್ರದೇಶಗಳಲ್ಲಿರುವ ಹಲವಾರು ಸಮಸ್ಯೆಗಳನ್ನು ಶಾಸಕರ ಗಮನಕ್ಕೆ ತಂದು, ಬಹಿರಂಗ ಮನವಿಯನ್ನು ಸಲ್ಲಿಸಿದರು.

ಸಭೆಯಲ್ಲಿ ಜನತಾಪಕ್ಷದ ಮುಖಂಡರಾದ ಶ್ರೀ ಪುರುಷೋತ್ತಮ ಪೂಜಾರಿ ಕಮ್ಯೂನಿಸ್ಟ್ ಪಕ್ಷದ ಮುಂದಾಳು ಕಾ. ಬಿ. ವಿ. ಕಕ್ಕಿಲ್ಲಾಯ, ಮಾರ್ಕ್ಸ್‌ವಾದೀ ಕಮ್ಯೂನಿಸ್ಟ್ ಪಕ್ಷದ ಕಾ. ಬಿ. ಮಾಧವ ಮುಂತಾದವರು ಭಾಷಣ ಮಾಡಿ, ಶಾಸಕರಿಗೆ ಅಭಿನಂದನೆಗಳನ್ನು ಸಲ್ಲಿಸುವುದರೊಂದಿಗೆ ಸರಕಾರವನ್ನು ಉರುಳಿಸಲು ಸಂಚು ಹೂಡುವ ಎಲ್ಲಾ ದುಷ್ಟ ಶಕ್ತಿಗಳ ಬಗ್ಗೆ ಜನರು ಜಾಗರೂಕರಾಗಿರಬೇಕೆಂದು ಕರೆಯಿತ್ತರು.

ಶಾಸಕರು ಮಾತನಾಡುತ್ತಾ ತಮ್ಮ ಪ್ರದೇಶಗಳಲ್ಲಿ ಕಳೆದ ಹಲವಾರು ವರ್ಷಗಳಿಂದ ಕೊಳೆಯುತ್ತಿರುವ ಹಲವು ಸಮಸ್ಯೆಗಳನ್ನು ಹುಡುಕಿ ತೆಗೆಯಲು ಹಾಗೂ ಅಂತಹ ಪ್ರಶ್ನೆಗಳಿಗೆ ಪರಿಹಾರಕ್ಕಾಗಿ ಕ್ರಮ ಕೈಗೊಳ್ಳಲು ಜನರು ಜಾಗೃತಿ ಹೊಂದಿದ್ದಾರೆಂದು ಹೇಳಿ ಅದಕ್ಕಾಗಿ ತಮ್ಮ ಅಭಿನಂದನೆಗಳನ್ನು ಸಲ್ಲಿಸಿದರು. ಮತ್ತು ಮನವಿಯಲ್ಲಿರುವ ಪ್ರಶ್ನೆಗಳಿಗಾಗಿ ತಮ್ಮಿಂದಾದಷ್ಟು ಶೀಘ್ರ ಪ್ರಯತ್ನ ತಾವು ಮಾಡುವುದಾಗಿ ತಿಳಿಸಿದರಲ್ಲದೆ, ತಮ್ಮ ಎಲ್ಲಾ ಸಹಕಾರವನ್ನು ಕೊಡುವುದಾಗಿ ಭರವಸೆ ಇತ್ತುದಲ್ಲದೆ, ಎಲ್ಲಾ ಜನರು ತಮ್ಮ ಅನುಕೂಲತೆಗಳನ್ನು ಪಡೆಯಲು ಪ್ರಯತ್ನಿಸಲು ಒಂದಾಗಬೇಕೆಂದರು.

ಸಂತಾಪ

ಮೈಸೂರು ಜಿಲ್ಲಾ ಸಿ.ಐ.ಟಿ.ಯು. ಲಾರಿ ವರ್ಕರ್ಸ್ ಯೂನಿಯನ್ ಕಾರ್ಯದರ್ಶಿಗಳಾಗಿದ್ದ ಮತ್ತು ಪಾರ್ಟಿಯ ಸದಸ್ಯರಾಗಿದ್ದ ಕಾಂ. ಎಂ. ಶೇಖರ್ ಅವರು ಇದೇ ತಾ॥ 7-3-83 ರಂದು ಅಕಸ್ಮಿಕ ಮರಣಕ್ಕೆ ತುತ್ತಾದರು. ಮೈಸೂರು ಜಿಲ್ಲಾ ಸಿ.ಐ.ಟಿ. ಯು. ಮತ್ತು ಪಾರ್ಟಿ ಸಮಿತಿಯು ಇವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿದೆ.

ಸಿ.ಐ.ಟಿ.ಯು. ರಾಜ್ಯ ಸಮಿತಿಯ ನಿರ್ಣಯಗಳು

ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಸಮಿತಿಯ ನಾಲ್ಕನೆಯ ಸಭೆಯು ತಾ॥ 6ನೇ ಮಾರ್ಚ್ 1983ರಂದು ಬೆಂಗಳೂರಿನಲ್ಲಿ ಕಾ. ಎಸ್. ಸೂರ್ಯನಾರಾಯಣರಾವ್‌ರ ಅಧ್ಯಕ್ಷತೆಯಲ್ಲಿ ನಡೆಯಿತು.

ಪ್ರಾರಂಭದಲ್ಲಿ ಸಭೆಯು ನಿಧನರಾದ ಸಿ.ಪಿ.ಐ. (ಎಂ.) ಪೋಲಿಟ್ ಬ್ಯೂರೋ ಸದಸ್ಯ ಕಾ. ಪ್ರಮೋದ್ ದಾಸ್‌ಗುಪ್ತ, ಸೋವಿಯತ್ ಒಕ್ಕೂಟದ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾ. ಲಿಯೋನಿಡ್ ಬ್ರೆಜ್ನೇವ್, ಪಶ್ಚಿಮ ಬಂಗಾಳದ ಎಡರಂಗ ಸರ್ಕಾರದ ರಾಜ್ಯ ಸಚಿವ ಕಾ. ಶಂಕರಗುಪ್ತ, ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಸಮಿತಿಯ ಸದಸ್ಯ ಕಾ. ಗಂಗಾಧರ ನಮೋಷಿಯವರ ಬಗ್ಗೆ ಸಂತಾಪಸೂಚಕ ನಿರ್ಣಯಗಳನ್ನು ಅಂಗೀಕರಿಸಿತು. ಪೋಟಿ ಸಂಘದ ಗೂಂಡಾಗಳ ಇರಿತಗಳಿಗೆ ಗುರಿಯಾಗಿ ಅಸುನೀಗಿದ ಭಾರತ್ ಗೋಲ್ಡ್ ಮೈನ್ಸ್ ಎಂಪ್ಲಾಯೀಸ್ ಯೂನಿಯನ್ನಿನ ಕಾರ್ಯಕಾರಿ ಸಮಿತಿಯ ಸದಸ್ಯ ಕಾ. ಆರೋಗ್ಯದಾಸ್ ಸ್ಮರಣೆಗೆ ಶ್ರದ್ಧಾಂಜಲಿಯನ್ನರ್ಪಿಸುವ ನಿರ್ಣಯವನ್ನು ಸಭೆಯು ಸ್ವೀಕರಿಸಿತು.

ಕಾ. ಎಸ್. ಸೂರ್ಯನಾರಾಯಣರಾವ್‌ರು ತಮ್ಮ ಅಧ್ಯಕ್ಷ ಭಾಷಣದಲ್ಲಿ ರಾಜ್ಯದಲ್ಲಿ ಹೊಸ ಸರ್ಕಾರ ಬಂದಿರುವುದು, ನಡೆದಿರುವ ಹೋರಾಟಗಳು, ಆಗಿರುವ ಮುಖ್ಯ ಒಪ್ಪಂದಗಳು, ಬೆಂಗಳೂರಿನಲ್ಲಿ ಹೊಸ ವಿಭಾಗಗಳ ಕಾರ್ಮಿಕರು ನೇತೃತ್ವ ಪಡೆಯಲು ಸಿ.ಐ.ಟಿ.ಯು.ವಿನ ಬಳಿ ಬರುತ್ತಿರುವುದು; ಮತ್ತು ಕರ್ತವ್ಯಗಳ ಬಗ್ಗೆ ಮಾತನಾಡಿದರು.

1983 ಜನವರಿ 21ರಿಂದ 23ರ ವರೆವಿಗೆ ಪಶ್ಚಿಮ ಬಂಗಾಳದ ಹೂಗ್ಲಿ ಜಿಲ್ಲೆಯ ಹಿಂದ್ ಮೋಟಾರ್ಸ್‌ನಲ್ಲಿ ನಡೆದ ಸಿ.ಐ.ಟಿ.ಯು. ಜನರಲ್ ಕೌನ್ಸಿಲ್ ಸಭೆಯ ಕಲಾಪಗಳ ಬಗ್ಗೆ ಪ್ರಧಾನ ಕಾರ್ಯದರ್ಶಿ ಕಾ. ಸಿ. ನಂಜುಂಡಪ್ಪನವರು ವರದಿ ಮಾಡಿದರು. ಜನರಲ್ ಕೌನ್ಸಿಲ್ ನಿರ್ಣಯಗಳನ್ನು ಉಪಾಧ್ಯಕ್ಷ ಕಾ. ಎಲ್. ಕೆ. ಉಪಾಧ್ಯಾಯರು ವರದಿ ಮಾಡಿದರು.

ತಾ॥ 24-1-1983ರಂದು ಹಿಂದ್ ಮೋಟಾರ್‌ನಲ್ಲಿ ನಡೆದ ಅಖಿಲ ಭಾರತ ಬೀಡಿ ಮತ್ತು ಸಿಗಾರ್ ಕಾರ್ಮಿಕರ ಸಮನ್ವಯ ಸಮಿತಿಯ ಬಗ್ಗೆ ನಮ್ಮ ರಾಜ್ಯ ಸಮಿತಿಯ ಕಾರ್ಯದರ್ಶಿ ಕಾ. ಮಹಮ್ಮದ್ ದಸ್ತಗೀರ್‌ರವರು ವರದಿ ಮಾಡಿದರು.

ಜಿಲ್ಲೆಗಳ ವರದಿಗಳನ್ನು ಕಾ. ಕೆ. ಹೂಸಬ್ಬ (ದ. ಕ.) ಕಾ. ಮೋಹನ್ (ಮೈಸೂರು), ಕಾ. ಬಡೇ ಸಾಹೇಬ್ (ತುಮಕೂರು), ಕಾ. ಮಹಮದ್ ಹಸನ್ ಖಾನ್ (ಗುಲ್ಬರ್ಗ), ಕಾ. ಎಸ್. ಸಪರಿದಾಸ್, ಕಾ. ಎಸ್. ವೈ. ಪ್ರಭು, ಕಾ. ಜಿ. ವಿ. ನಾಯಕ್, ಕಾ. ಟಿ. ಎಸ್. ನಾಯಕ್ (ಉ. ಕ.) ಕಾ. ಡಿ. ಎಂ. ಕಲಾಸಿ (ಬಿಜಾಪುರ), ಕಾ. ಎ.ಸಿ. ಕೇಶವ (ಚಿಕ್ಕಮಗಳೂರು) ಕಾ. ನಾರಾಯಣರಾವ್ ಭಾನು (ಬೆಂಗಳೂರು), ಕಾ. ವಿ. ಜಿ. ಕೆ. ನಾಯರ್ (ಚಿತ್ರದುರ್ಗ) ಕೊಟ್ಟರು.

ಸಿ.ಐ.ಟಿ.ಯು. 5ನೆಯ ಅ. ಭಾ. ಸಮ್ಮೇಳನ

5ನೆಯ ಅಖಿಲ ಭಾರತ ಸಮ್ಮೇಳನವು ಕಾನ್ಪುರದಲ್ಲಿ 13-4-83 ರಿಂದ 17-4-83ರವರೆಗೆ ನಡೆಯುತ್ತದೆ. ಸಮ್ಮೇಳನಕ್ಕೆ ಹೋಗುವ ಪ್ರತಿನಿಧಿಗಳು ಪ್ರತಿನಿಧಿ ಶುಲ್ಕ ರೂ. 5-ಊಟದ ಖರ್ಚು ರೂ. 100-(ಸ್ವಾಗತ ಸಮಿತಿಗೆ) ಅಲ್ಲದೆ ರಾಜ್ಯ ಸಮಿತಿಗೆ ರೂ. 100 ಕೊಡಬೇಕೆಂದು ತೀರ್ಮಾನಿಸಲಾಯಿತು.

ಸಮ್ಮೇಳನದಲ್ಲಿ ಭಾಗವಹಿಸುವ ಸಂಘಗಳು 1979, 1980, 1981, 1982—ಈ ನಾಲ್ಕು ವರ್ಷಗಳಿಗೆ ಅಫಿಲಿಯೇಷನ್ ಫೀಯನ್ನು ಕಟ್ಟಿರಬೇಕು. ಇನ್ನೂ ಕಟ್ಟದಿರುವವರು ನವದೆಹಲಿಗೆ ಟಿ. ಎಂ. ಓ ಮುಖಾಂತರ ಅಫಿಲಿಯೇಷನ್ ಫೀಯನ್ನು ಕೂಡಲೇ ಕಳುಹಿಸಬೇಕು.

ಪೌರ ಕಾರ್ಮಿಕರ ರಾಜ್ಯ ಸಮ್ಮೇಳನ

ಪೌರ ಕಾರ್ಮಿಕರ ರಾಜ್ಯ ಸಮ್ಮೇಳನವನ್ನು ಮೇ 15ರಂದು ಮೈಸೂರಿನಲ್ಲಿ ನಡೆಸಲು ತೀರ್ಮಾನವಾಯಿತು. ಸಿ.ಐ.ಟಿ.ಯು. ರಾಜ್ಯ ಸಮಿತಿಯ ಸದಸ್ಯರು ಮತ್ತು ಸಂಘಗಳ ಪದಾಧಿಕಾರಿಗಳು ಪೌರ ಕಾರ್ಮಿಕರ ಸಂಘವಿಲ್ಲದಿರುವ ನಗರ ಮತ್ತು ಪಟ್ಟಣಗಳಲ್ಲಿ ಪೌರ ಕಾರ್ಮಿಕರ ಸಂಘಗಳನ್ನು ರಚಿಸಲು ಪ್ರಯತ್ನಿಸಬೇಕು.

ಆರ್. ಐ. ಸಿ. ಪ್ರಕರಣ

21-1-1983ರಂದು ಬೆಂಗಳೂರು ಜಿಲ್ಲೆಯ ವರ್ತೂರು ವಿಧಾನಸಭಾ ಕ್ಷೇತ್ರದಲ್ಲಿ ವೈಟ್‌ಫೀಲ್ಡ್ ಬಳಿ ಇರುವ ಆರ್. ಐ. ಸಿ. ಕಾರ್ಖಾನೆಯ ಪಕ್ಕದಲ್ಲಿರುವ ಕಾರ್ಖಾನೆಗೆ ಬೆಂಕಿ ಬಿದ್ದದ್ದು, ದೊಂಬಿಯಾದದ್ದು, ಆರ್.ಐ.ಸಿ. ಕಾರ್ಮಿಕರ ಹೋರಾಟ ಇವುಗಳ ಬಗ್ಗೆ ಕಾರ್ಯದರ್ಶಿ ಕಾ. ವಿ. ಜಿ. ಕೆ. ನಾಯರ್ ವರದಿ ಕೊಟ್ಟರು. ಅಲ್ಲಿ ನಡೆದ ಪುಂಡಾಟಿಕೆ, ವಿಧ್ವಂಸಕ ಕೃತ್ಯಗಳು ವರ್ಗ ಹೋರಾಟವಲ್ಲ ಹಾಗೂ ಸಿ.ಐ.ಟಿ.ಯು. ಧೋರಣೆಗೆ ವಿರೋಧವಾಗಿವೆ ಮತ್ತು ಸಿ. ಐ. ಟಿ. ಯು. ಬೆಳವಣಿಗೆಗೆ ಧಕ್ಕೆಯನ್ನುಂಟು ಮಾಡಿವೆ ಎಂಬ ಅಭಿಪ್ರಾಯಕ್ಕೆ ಬಂದ ರಾಜ್ಯ ಸಮಿತಿಯು ಈ ವಿಷಯವಾಗಿ ರಾಜ್ಯದಲ್ಲಿರುವ ಎಲ್ಲಾ ಸಿ.ಐ.ಟಿ.ಯು. ಸಂಘಗಳ ಸದಸ್ಯರಿಗೆ ತಿಳುವಳಿಕೆ ಕೊಡಬೇಕು ಎಂದು ತೀರ್ಮಾನಿಸಿತು.

ಸಿ.ಐ.ಟಿ.ಯು. ಮಾಸಿಕಗಳಾದ ಇಂಗ್ಲೀಷ್ "ದಿ ವರ್ಕಿಂಗ್ ಕ್ಲಾಸ್"-ಹಿಂದಿ "ಸಿ.ಐ.ಟಿ.ಯು. ಮಜ್ದೂರ್" ಗಳ ಮಾರಾಟವನ್ನೂ, ಚಂದಾದಾರರನ್ನೂ ಹೆಚ್ಚಿಸಬೇಕು. ಜನಪ್ರಿಯಗೊಳಿಸಬೇಕೆಂದು ನಿರ್ಣಯಿಸಿದ ಸಭೆಯು ಈ ಪತ್ರಿಕೆಗಳ ಏಜೆನ್ಸಿಗಳ ಬಾಕಿಯನ್ನು ಚುಕ್ತಾ ಮಾಡಿಸಬೇಕೆಂದು ಸಂಬಂಧಪಟ್ಟ ರಾಜ್ಯ ಸಮಿತಿಯ ಸದಸ್ಯರಿಗೆ ತಿಳಿಸಿತು.

ಕಾರ್ಲ್‌ಮಾರ್ಕ್ಸ್ ನಿಧನರಾಗಿ 14-3-1983ಕ್ಕೆ ನೂರು ವರ್ಷಗಳಾದುವು. ಈ ಶತಾಬ್ಧಿಯನ್ನು ಸಿ. ಐ. ಟಿ. ಯು. ಸಂಘಗಳು ಈ ವರ್ಷವೆಲ್ಲಾ ಆಚರಿಸಬೇಕು, ಮಾರ್ಕ್ಸ್‌ವಾದವನ್ನು, ಈ ನೂರು ವರ್ಷಗಳಲ್ಲಿ ಮಾರ್ಕ್ಸ್‌ವಾದದ ಬೆಳವಣಿಗೆ ಮತ್ತು ಸಾಧನೆಗಳನ್ನು ವಿವರಿಸಿ ಜನಪ್ರಿಯಗೊಳಿಸುವ ಕಾರ್ಯಕ್ರಮವನ್ನು ಜರುಗಿಸಬೇಕು. ಈ ಬಗ್ಗೆ ಕಿರುಹೊತ್ತಿಗೆಗಳನ್ನು ಪ್ರಕಟಿಸಬೇಕು.

ಗ್ರಾಚ್ಯುಟಿ

ಗ್ರಾಚ್ಯುಟಿ ಬಗ್ಗೆ ಸರ್ವೋಚ್ಚ ನ್ಯಾಯಾಲಯವು ಇತ್ತಿರುವ ತೀರ್ಪು ಕಾರ್ಮಿಕರಿಗೆ ಹಾನಿಕರವಾಗಿದ್ದು ಕಾನೂನಿನಲ್ಲಿ ಸೂಕ್ತ ಬದಲಾವಣೆ ತರಲು ಸರ್ಕಾರವನ್ನು ಒತ್ತಾಯಪಡಿಸಲು 25-3-1983ರಂದು ಚಳವಳಿ ನಡೆಸಲು ಸಭೆ ಕರೆಯಿತ್ತಿತ್ತು.

ಅಖಿಲ ಭಾರತ ಸಮ್ಮೇಳನಕ್ಕೆ ಪ್ರತಿನಿಧಿಗಳ ಹೆಸರುಗಳನ್ನು ರಾಜ್ಯ ಸಮಿತಿ ಸದಸ್ಯರು 30-3-1983ರ ಒಳಗೆ ಬೆಂಗಳೂರು ತಲುಪುವಂತೆ ಸಿ. ಐ.ಟಿ.ಯು. ರಾಜ್ಯ ಕೇಂದ್ರಕ್ಕೆ ಕಳುಹಿಸಬೇಕು.

ಸ್ವಾಗತಾರ್ಹ ಹೆಜ್ಜೆ

(ಒಂದನೇ ಪುಟದಿಂದ)

ಅಣುಶಕ್ತಿ ಚಾಲಿತ ವಿದ್ಯುತ್ ಘಟಕಗಳನ್ನು ಸ್ಥಾಪಿಸುವಂತೆ ಕೇಂದ್ರದ ಮೇಲೆ ಒತ್ತಾಯತರಲು ಸಾಧ್ಯವಾಗುವುದು. ಹಾಗೆಯೇ ಇನ್ನೂ ಕೆಲವು ಸವಲತ್ತುಗಳನ್ನು ಪಡೆಯಬಹುದು.

ರಾಜ್ಯ ಸರಕಾರಗಳು ಯಾವ ಪಕ್ಷಕ್ಕೆ ಸೇರಿದ್ದರೂ ಕೂಡ ಅವುಗಳು ಎದುರಿಸುತ್ತಿರುವ ಸಮಸ್ಯೆ ಒಂದೇ ತೆರನಾಗಿರುವುದರಿಂದ, ಅವರೆಲ್ಲರ ಒಮ್ಮತದ ಸಂಯುಕ್ತ ಹೋರಾಟಕ್ಕೆ ಯಾವುದೇ ರೀತಿಯ ಅಡ್ಡಿ ಆತಂಕ ಉಂಟಾಗಿರುವುದಿಲ್ಲ. ಈ ದಿಶೆಯಲ್ಲಿ ರಾಮಕೃಷ್ಣ ಹೆಗ್ಗಡೆಯವರ ಪ್ರಯತ್ನ ಸ್ವಾಗತಾರ್ಹ. ಈ ನಾಲ್ಕು ರಾಜ್ಯಗಳ ಮುಖ್ಯಮಂತ್ರಿಗಳು ಪ.ಬಂಗಾಳ, ತ್ರಿಪುರ, ಕಾಶ್ಮೀರ ರಾಜ್ಯಗಳ ಸಹಕಾರ ಪಡೆದು ತಮ್ಮ ಹಕ್ಕಿಗಾಗಿ ಹೋರಾಡಿದರೆ ಇನ್ನೂ ಹೆಚ್ಚಿನ ಬಲ ಬರುತ್ತದೆ. ಹೆಚ್ಚು ಅಧಿಕಾರ, ಹೆಚ್ಚು ವರಮಾನಗಳಿಗಾಗಿ ಹೋರಾಡಲು ನಿರ್ಧರಿಸಿರುವ ಈ ನಾಲ್ಕು ರಾಜ್ಯಗಳ ನಿಲುವೆಯನ್ನು ನಾವು ಸ್ವಾಗತಿಸುತ್ತೇವೆ ಮತ್ತು ಅವರ ಸಂಯುಕ್ತ ಹೋರಾಟಕ್ಕೆ ಬೆಂಬಲ ನೀಡುತ್ತೇವೆ.

ರಾಜ್ಯದ ಮುಂಗಡ ಪತ್ರ ಕುರಿತು

(ಒಂದನೇ ಪುಟದಿಂದ)

ಸಲಕರಣೆಗಳಿಗೆ ತೆರಿಗೆ ವಿನಾಯಿತಿ, ಹೊಸದಾಗಿ ನೀರಾವರಿಗೆ ಒಳಗಾದ ರೈತರು ಜಮೀನು ಸಮ ಮಾಡುವುದೇ ಮುಂತಾದ ಸಮಸ್ಯೆಗಳನ್ನು ಎದುರಿಸಬೇಕಾಗಿರುವುದರಿಂದ ಅವರಿಗೆ ವಾಸ್ತವಿಕವಾಗಿ ನೀರು ಒದಗಿಸಿದ ದಿನಾಂಕದಿಂದ 5 ವರ್ಷಗಳ ಕಾಲ ನೀರಿನ ದರದಿಂದ ವಿನಾಯಿತಿ. ಇವೆಲ್ಲ ರೈತರಿಗೆ ಕೊಡಮಾಡಿದ ಕೊಡುಗೆಗಳು.

ಇವುಗಳನ್ನೆಲ್ಲ ನಾವು ಸ್ವಾಗತ ಮಾಡುತ್ತೇವೆ. ಆದರೆ ಈ ವಿನಾಯತಿ ಬಡ ಮತ್ತು ಮಧ್ಯಮ ರೈತರಿಗೆ ಸಿಗಬೇಕಲ್ಲದೆ, ಸಾಲ ಮರುಪಾವತಿ ಮಾಡುವ ನೀರಿನ ಕರ ಕೊಡಲಿಕ್ಕೆ ಸಮರ್ಥರಾದ ಭೂಮಾಲಿಕರಿಗೂ ಸಿರಿವಂತ ರೈತರಿಗೂ ಒದಗಿಸುವುದರಿಂದ ಸರ್ಕಾರದ ಬೊಕ್ಕಸಕ್ಕೆ ಹಾನಿ ಉಂಟುಮಾಡಿದಂತಾಗುತ್ತದೆ.

ರಾಗಿ, ಜೋಳ, ಮಾರಾಟ ತೆರಿಗೆ ದರ ಶೇ. 4 ರಿಂದ ಶೇ. 2ಕ್ಕೆ ಇಳಿಸಲಾಗಿದೆ. ಆಹಾರ ಧಾನ್ಯದ ಮೇಲಿನ ಮಾರಾಟಕರ ರದ್ದು ಮಾಡುವುದು ಅಗತ್ಯ, ಕಡಿಮೆ ಮಾಡುವುದಲ್ಲ. ಹಾಗೆಯೇ ಒಕ್ಕಲತನ ಹುಟ್ಟುವಳಿ ಮಾರುಕಟ್ಟೆ ಸಮಿತಿಯಿಂದ ರೈತರ ಸುಲಿಗೆ ನಡೆಯುತ್ತಿದ್ದು ಇದರಿಂದಲೂ ಪರಿಹಾರ ದೊರೆಯುವುದು ಅತ್ಯಗತ್ಯ.

ಅತ್ಯಾವಶ್ಯಕ ತುರ್ತು ಕ್ರಮಗಳು

ಇಂದು ನಮ್ಮ ರಾಜ್ಯಕ್ಕೆ ಬೇಕಾಗಿರುವುದು ಹೆಚ್ಚು ವಿದ್ಯುಚ್ಛಕ್ತಿ, ನೀರಾವರಿ ವ್ಯವಸ್ಥೆ, ಕುಡಿಯುವ ನೀರು ಮತ್ತು ಕಾಯಂ ಬರಗಾಲ ನಿವಾರಣೋಪಾಯ. ನಾಗಾರ್ಜುನ ಸಾಗರ ಯೋಜನೆಯನ್ನು ಆದಷ್ಟು ಬೇಗ ಪೂರ್ಣಗೊಳಿಸುವ ಛಲದಿಂದ ಕೆಲವು ವರ್ಷಗಳ ಹಿಂದೆ ಆಂಧ್ರ ಸರಕಾರ ಕೇಂದ್ರದ ಸಹಾಯವಿಲ್ಲದಿದ್ದರೂ ಕೂಡ ರಾಜ್ಯದ ಹೆಚ್ಚಿನ ಸಂಪನ್ಮೂಲಗಳನ್ನು ಆ ಯೋಜನೆಗಾಗಿಯೇ ವ್ಯಯಮಾಡಿದ ಕಾರಣದಿಂದಲೇ ಸಾವಿರಾರು ಎಕರೆ ನೀರಾವರಿಯಾಗಲು ಸಾಧ್ಯವಾಯಿತು. ಈ ದೃಷ್ಟಿಯಲ್ಲಿ ನಮ್ಮ ರಾಜ್ಯದ ತುರ್ತು ಅವಶ್ಯಕತೆಗಳತ್ತ ಶೀಘ್ರ ಗಮನಹರಿಸುವುದು ಅತ್ಯಗತ್ಯ.

ವಿದ್ಯುಚ್ಛಕ್ತಿ ಉತ್ಪಾದನೆಗೆ ಈ ರೂ. 26 ಕೋಟಿ ಮೀಸಲಿಡಲಾಗಿದೆ. ಕಾಳಿ ಯೋಜನೆಯ ಎರಡನೇ ಹಂತದ ಕಾರ್ಯವನ್ನು ಪ್ರಾರಂಭಿಸಲಾಗುವುದೆಂಬ ಆಶ್ವಾಸನೆ ನೀಡಲಾಗಿದೆ. ಇದು ಸ್ವಾಗತಾರ್ಹ. ಇದರಂತೆಯೇ ನೀರಾವರಿ ಯೋಜನೆಗಳಿಗೆ ರೂ. 87 ಕೋಟಿ ಖರ್ಚು ಮಾಡಲಾಗುವುದು. ಒಂದೆಡೆ ಈ ವರ್ಷದ ಬಜೆಟ್ಟಿನಲ್ಲಿ ನಿರುದ್ಯೋಗ ಸಮಸ್ಯೆಯ ಪರಿಹಾರಕ್ಕೆ, ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚು ಉದ್ಯೋಗಾವಕಾಶ ಒದಗಿಸುತ್ತೇವೆಂದು ಆಶ್ವಾಸನೆ ಕೊಡುತ್ತಿರುವಾಗ ವಿದ್ಯುಚ್ಛಕ್ತಿ-ನೀರಾವರಿ ಇಲ್ಲದೆ ಅಂಥ ಪ್ರಶ್ನೆಯನ್ನು ಬಿಡಿಸಲು ಸಾಧ್ಯವಿಲ್ಲ. ಆ ದೃಷ್ಟಿಯಿಂದ ವಿದ್ಯುಚ್ಛಕ್ತಿ-ನೀರಾವರಿಗಾಗಿ ಮೀಸಲಿಟ್ಟ ಹಣ ಸಾಕಷ್ಟಿಲ್ಲೆಂದೇ ಹೇಳಬೇಕಾಗುತ್ತದೆ.

ಇದರ ಜೊತೆಯಲ್ಲೇ ಬರಗಾಲ ನೆರೆ ಹಾವಳಿಗಳ ಕಾಯಂ ಪರಿಹಾರ ಕುರಿತು ಯಾವುದೇ ನಿರ್ದೇಶನಗಳಿಲ್ಲ. ಈಗ ಬರಗಾಲ ನಿವಾರಣೆಗಾಗಿ ಕೇಂದ್ರ ಸರಕಾರ ರೂ. 10 ಕೋಟಿ ಮಂಜೂರಿ ಮಾಡಿದೆ ಎಂದು ತಿಳಿದು ಬರುತ್ತದೆ. ರಾಜ್ಯ ಸರಕಾರ ರೂ. 50 ಕೋಟಿ ಬೇಡಿದೆ. ಕೇಂದ್ರದಿಂದ ಬರುವ ಈ ಅಲ್ಪ ಹಣವನ್ನಾದರೂ ಕಾಯಂ ಬರಗಾಲ ನಿವಾರಣೆಗಳಿಗೋಸ್ಕರ ಖರ್ಚು ಮಾಡುವುದೊಳಿತು.

ಕೆಲವು ಕ್ಷೇತ್ರಗಳಲ್ಲಿ ಜನತೆಗೆ ಪರಿಹಾರ ಒದಗಿಸಿರುವುದನ್ನು ನಾವು ಸ್ವಾಗತ ಮಾಡುತ್ತೇವೆ. ಅದೇ ಸಮಯದಲ್ಲಿ ಹೆಚ್ಚು ಕರಕೊಡುವ ಶಕ್ತಿ ಇರುವವರಿಗೂ ವಿನಾಯಿತಿ ತೋರಿಸಿರುವುದು ಸರಿಯಲ್ಲೆಂದೂ, ಇದರಿಂದ ಆದಾಯ ಕಡಿಮೆಯಾಗಿ, ಅತ್ಯಾವಶ್ಯಕ ಕೆಲಸಗಳಿಗೆ ಅಡ್ಡಿಯುಂಟಾಗಿರುವುದರಿಂದ, ಅವುಗಳ ಕುರಿತು ಪುನರ್ವಿಚಾರ ಮಾಡಬೇಕೆಂದು ಕೇಳಿಕೊಳ್ಳುತ್ತೇವೆ.

ಅಂದಾಜು ಪತ್ರಿಕೆಯಲ್ಲಿ ಯೋಜನೆಗಳಿಗಾಗಿ ಖರ್ಚು ಮಾಡತಕ್ಕ ಹಣದಲ್ಲಿ ಹೆಚ್ಚಿನಂಶ ದುರುಪಯೋಗವಾಗುತ್ತಿದ್ದು, ಅವುಗಳ ಕುರಿತು ಹೆಚ್ಚು ಗಮನ ಹರಿಸುವುದು ಅಗತ್ಯವೆಂದು ಹೇಳಲಿಚ್ಛಿಸುತ್ತೇವೆ.

ಗ್ರಾಚ್ಯುಟಿ ಕಡಿತ ರಾಜ್ಯಾದ್ಯಂತ ಪ್ರತಿಭಟನೆ

ಸಿ. ಐ. ಟಿ. ಯು ಕರ್ನಾಟಕ ರಾಜ್ಯ ಸಮಿತಿಯ ಕರೆಯ ಮೇರೆಗೆ ಗ್ರಾಚ್ಯುಟಿ ಕಡಿತವನ್ನು ಪ್ರತಿಭಟಿಸಿ, ಕರ್ನಾಟಕದ ವಿವಿಧ ಭಾಗಗಳಲ್ಲಿ ಪ್ರದರ್ಶನಗಳು ನಡೆದಿರುವುದಾಗಿ ವರದಿಯಾಗಿದೆ. ಈ ಹೋರಾಟದ ಅಂಗವಾಗಿ ಬೆಂಗಳೂರಿನ ಮೈಸೂರು ಮಿಲ್ ಮತ್ತು ಮಿನರ್ವ ಮಿಲ್ ಕಾರ್ಮಿಕರುಗಳು ಒಂದು ದಿನದ ಮುಷ್ಕರವನ್ನು ನಡೆಸಿರುವುದಾಗಿ ವರದಿಯಾಗಿದೆ.

ಸಿ. ಐ. ಟಿ. ಯು. ನಿಂದ ಸಾಂಕೇತಿಕ ಮುಷ್ಕರ

ಮಾರ್ಚ್ 30 ರಂದು ಸಿ.ಐ.ಟಿ. ಯು.ಗೆ ಸೇರಿದ ಕಾರ್ಮಿಕ ಸಂಘಗಳಿಂದ ವಿಧಾನಸೌಧದ ಮುಂದೆ ಕಾರ್ಮಿಕರ ಬೇಡಿಕೆಗಳನ್ನು ಒತ್ತಾಯಿಸಿ ಒಂದು ದಿನದ ಮುಷ್ಕರವನ್ನು ನಡೆಸಲಾಗುವುದೆಂದು ಸಿ.ಐ.ಟಿ.ಯು. ಬೆಂಗಳೂರು ಜಿಲ್ಲಾ ಸಮಿತಿ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

Printed & Published by P. Ramachandra Rao by him on behalf of the Communist Party of India (Marxist) Karnataka State Committee L-56 K. V. Temple Street Sultanpet, Bangalore 560053. Editorial and managerial office : L-56, K. V. Temple Street, Sultanpet, B-53. Phone : 24145
Printed at Karnataka Pressmen Associates (P) Limited, 54/1, K. R. Road, Bangalore-4 Editor : P. RAMACHANDRA RAO